# ನಿವೇದಿತಾ ಹಾಗೂ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ

ಸಿ. ಎಸ್. ಮಂಗಳಮ್ಮ



**ಭಾರತ ಸ್ವಾತಂತ್ರ್ಯ ಸಂಗ್ರಾಮದ ಅಗೋಚರ ಸಾಹಸಗಾಥೆಗಳ ಶೋಧವೇ ಒಂದು ಮಹಾಯಾತ್ರೆಯಾಗಬಹುದು. ಅದರಲ್ಲಿ ಗುಪ್ತವಾಗಿಯೂ, ವ್ಯಕ್ತವಾಗಿಯೂ ಹೋರಾಡಿದ ಅಸಂಖ್ಯಾತ ವೀರವನಿತೆಯರಲ್ಲಿ ಒಬ್ಬಾಕೆ ಸೋದರಿ ನಿವೇದಿತಾ. ಅವಳ ಹೃದಯದಾಳದಲ್ಲಿದ್ದ ಭಾರತಪ್ರೇಮ ಹೇಗೆ ಅವಳನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮಾಡಿತು – ಈ ಕಥೆಯನ್ನು ಇಲ್ಲಿ ವಿವರಿಸಿ ಹೇಳುವ ಲೇಖಕಿ ಮೈಸೂರು ಆಶ್ರಮದ ಭಕ್ತರು.**

‘‘ನಾವು ಆಶಾವಾದಿಗಳೂ ಅಲ್ಲ, ನಿರಾಶಾವಾದಿಗಳೂ ಅಲ್ಲ. ನಮ್ಮದು ದೃಢ ನಿಶ್ಚಯ.. ನಾವು ಅಗ್ರಗಾಮಿಗಳಾಗಿ ಪ್ರಾಣವನ್ನಪ್ಪವವರು, ನಾವು ನಮ್ಮ ಶರೀರದ ಮೂಲಕ ಸೇತುವೆಯನ್ನು ಸಿದ್ಧಪಡಿಸುತ್ತೇವೆ, ಮುಂದಿನ ಸೈನಿಕರು ಆ ಸೇತುವೆಯ ಮೇಲೆ ಹಾದು ಹೋಗಿ ಸ್ವಾತಂತ್ರ್ಯದ ವಿಜಯೋತ್ಸವವನ್ನು ಆಚರಿಸುವರು.’’ ಇದು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಸೋದರಿ ನಿವೇದಿತಾಳ ಆಗ್ರಹದ ಮಾತು.

ವಿದೇಶಿಯಳಾಗಿದ್ದ ಮಾರ್ಗರೆಟ್ ಎಲಿಜ಼ಬೆತ್ ನೊಬೆಲ್, ‘ನಿವೇದಿತಾ’ ಆಗಿ ಅಪ್ಪಟ ಭಾರತೀಯಳಾಗಿ ಬ್ರಿಟಿಷರ ದಾಸ್ಯದಿಂದ ಭಾರತವನ್ನು ಮುಕ್ತಿಗೊಳಿಸುವ ಸಲುವಾಗಿ ನಡೆಸಿದ ಹೋರಾಟ ಅತ್ಯಾಶ್ಚರ್ಯವೆನಿಸಬಹುದು. ಆದರೆ ಅವಳ ‘ಭಾರತೀಯತೆ’ಯ ಹಿನ್ನೆಲೆ ಮತ್ತಷ್ಟು ರೋಚಕವಾದದ್ದು. ಸಂಕ್ಷಿಪ್ತವಾಗಿ ಇದರ ಪರಿಚಯ ಮಾಡಿಕೊಳ್ಳೋಣ. ಸ್ವಾತಂತ್ರ್ಯಕ್ಕಾಗಿ ಹೋರಾಡುವ ಗುಣ ಅವಳಿಗೆ ಹುಟ್ಟಿನಿಂದಲೇ ಬಂದಿತ್ತೆನ್ನಬಹುದು. ಐರಿಷ್ ಜನಾಂಗದವರು ಇಂಗ್ಲಿಷಿನವರ ದಬ್ಬಾಳಿಕೆಯನ್ನು ಎದುರಿಸಿ ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಹೋರಾಡುತ್ತಿದ್ದವರ ಪೈಕಿ ಜಾನ್ ನೋಬೆಲ್ ಒಬ್ಬರು. ಅವರ ಮಗ ಸ್ಯಾಮ್ಯುಯಲ್ ರಿಚ್ಮಂಡ್ ಇವನೂ ಸಹ ಸ್ವಾತಂತ್ರ್ಯಪ್ರಿಯ, ಜೊತೆಗೆ ಧರ್ಮ ಭೀರು, ದೀನ ದಲಿತರ ಬಗ್ಗೆ ಇತ್ತು ದಯೆ. ಇವನ ಮಗಳೇ ಮಾರ್ಗರೆಟ್ ಎಲಿಜ಼ಬೆತ್. ಈ ಗುಣಗಳು ಅವಳಲ್ಲಿ ರಕ್ತಗತವಾಗಿತ್ತು. ಅವಳು ದಿಟ್ಟೆ, ಧೀರೆ, ಸ್ವತಂತ್ರ ಮನೋಭಾವದವಳಾದರೂ ಇತರರಿಗೆ ನೋವುಂಟು ಮಾಡಿದವಳಲ್ಲ. ಬಡತನದಲ್ಲಿ ಬೆಳೆದಿದ್ದರೂ, ಸ್ವಾಭಿಮಾನಿ. ಯಾವುದನ್ನೂ ಪೂರ್ಣವಾಗಿ ಅರಿಯದೆ ಒಪ್ಪುವವಳಲ್ಲ. ಕೆಲವೊಮ್ಮೆ ಇವಳ ವಾದ ವಿವಾದಗಳಿಂದ ಸಮಾಜವನ್ನು ಎದುರಿಸಬೇಕಾದ ಕಠಿಣ ಪರಿಸ್ಥಿತಿ ಉಂಟಾಗುತ್ತಿತ್ತು. ಅವಳೆಂದೂ ತನ್ನ ದೃಢ ನಿಶ್ಚಯದಿಂದ ಹಿಮ್ಮೆಟ್ಟಿದವಳಲ್ಲ. ಸಮಾಜದ ಹಿತ ಅವಳ ಗುರಿಯಾಗಿತ್ತು. ತನ್ನ ಸ್ವತಂತ್ರ ಮನೋಭಾವನೆಯನ್ನು ಉಳಿಸಿಕೊಳ್ಳಬೇಕಾದರೆ ಅವಳಿಗೆ ಹೋರಾಟ ಅನಿವಾರ್ಯವಾಗಿತ್ತು.

ಜೀವನ ಒಂದು ಸಂಗ್ರಾಮ. ಅಲ್ಲಿ ಪ್ರತಿ ಕ್ಷಣವೂ ಬೇಕು–ಬೇಡ, ಹೌದು–ಇಲ್ಲಗಳ ಹೋರಾಟ ನಡೆಯುತ್ತಲೇ ಇರುತ್ತದೆ. ಮಹಾಪುರುಷರು ತಮ್ಮ ವೈಯಕ್ತಿಕ ಇಚ್ಛೆಗಳನ್ನು ಬದಿಗಿಟ್ಟು, ಲೋಕ ಹಿತಕ್ಕಾಗಿ ಹೋರಾಡುತ್ತಾರೆ. ಅವರಿಗೆ ಸೋಲು, ಗೆಲುವುಗಳ ಕಡೆ ನಿರ್ಲಕ್ಷ್ಯ. ಜನಹಿತ ಒಂದೇ ಗುರಿ. ಮಾರ್ಗರೆಟ್‌ಳ ಜೀವನವೂ ಇದಕ್ಕೆ ಹೊರತಾಗಿರಲಿಲ್ಲ. ಸಾಮಾನ್ಯ ಜನರಿಗಿಂತ ಒಂದು ವಿಶೇಷತೆ ಅವಳ ಬಾಲ್ಯದಿಂದಲೂ ಕಂಡುಬರುತ್ತದೆ. ಶಿಕ್ಷಣವನ್ನು ಪೂರೈಸಿದ ನಂತರ ತನಗೆ ಪ್ರಿಯವಾಗಿದ್ದ ಶಿಕ್ಷಕ ವೃತ್ತಿಯನ್ನು ಕೈಗೊಂಡಳು. ಮಕ್ಕಳಿಗೆ ಆಟಗಳ ಮೂಲಕವೇ ಪಾಠಗಳನ್ನು ಕಲಿಸುತ್ತಿದ್ದಳು. ಇವಳ ಈ ಸ್ವತಂತ್ರ ಭಾವನೆಗೆ, ಆಗಿನ ಸಮಾಜದಲ್ಲಿ ಪ್ರೋತ್ಸಾಹ ಸಿಗಲಿಲ್ಲ. ಆದರೆ ಇವಳ ಪ್ರತಿಭೆ, ವಾಗ್ಧಾರೆ ಕೆಲವು ಗಣ್ಯ ವ್ಯಕ್ತಿಗಳನ್ನು ಆಕರ್ಷಿಸಿತು. ಶಿಕ್ಷಣದ ಬದಲಾವಣೆಯ ಹೋರಾಟದಲ್ಲಿ ಪೂರ್ಣ ಯಶಸ್ಸು ಸಿಗದಿದ್ದರೂ, ಮಾರ್ಗರೆಟಳಿಗೆ ತೃಪ್ತಿಯನ್ನು ಉಂಟುಮಾಡಿತ್ತು. ಇವಳ ಕಾರ್ಯಚಟುವಟಿಕೆ ಸೇವಾಮನೋಭಾವಗಳು ಸಮಾಜದಲ್ಲಿ ಒಬ್ಬ ಗಣ್ಯ ವ್ಯಕ್ತಿಯನ್ನಾಗಿ ಮಾಡಿದವೆಂದರೆ ತಪ್ಪಿಲ್ಲ. ವೈಯಕ್ತಿಕವಾದ ಸ್ವಾತಂತ್ರ್ಯ ಹೋರಾಟದಲ್ಲಿ ಯಶಸ್ಸುಗಳಿಸಿದಳೆನ್ನ

ಬಹುದು. ಇವಳೊಬ್ಬ ಆದರ್ಶ ವ್ಯಕ್ತಿಯಾಗಿ ಪರಿಗಣಿಸಲ್ಪಟ್ಟಳು. ೧೮೯೨ ರಲ್ಲಿ ಐರ್ಲೆಂಡ್ ಪರವಾಗಿ 'ಹೋಮ್ ರೂಲ್ ಬಿಲ್' ಪಾರ್ಲಿಮೆಂಟ್ ಮುಂದಿಟ್ಟಾಗ, ಅದರ ಪರವಾಗಿ ನಿರ್ಭಯವಾಗಿ ವಾದಮಾಡಿದಳು.

''ಪತ್ರಿಕೋದ್ಯಮಿಯಾಗಿ, ಶಿಕ್ಷಣ ತಜ್ಞೆಯಾಗಿ, ಉಪನ್ಯಾಸಕಳಾಗಿ ಎಲ್ಲ ಬಗೆಯ ಸ್ವಾತಂತ್ರ್ಯಕ್ಕಾಗಿ ಹೋರಾಡುವವಳಾಗಿ ಉಜ್ವಲ ಜೀವನ ನಡೆಸಿ ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಯಾಗಿ ಮೆರೆದಳು'' ಎಂದು 'ಲಂಡನ್ ಟೈಮ್ಸ್' ಪತ್ರಿಕೆಯು ನಿವೇದಿತಾ ಕುರಿತು ಮೆಚ್ಚಿ ಬರೆದಿದೆ.



ಮಾರ್ಗರೆಟ್‌ಳ ವೈಯಕ್ತಿಕ ಜೀವನ ಸಂಗ್ರಾಮದ ಎರಡನೇ ಹೋರಾಟದಿಂದ ಅವಳ ಬದುಕಿನ ದಿಕ್ಕೇ ಬದಲಾಯಿಸಿತು. ಪಶ್ಚಿಮದಿಂದ ಪೂರ್ವಕ್ಕೆ ಪರಿವರ್ತನೆಗೊಂಡಿತು. ೧೮೯೩ರಲ್ಲಿ ಚಿಕಾಗೋದಲ್ಲಿ ನಡೆದ 'ವಿಶ್ವಧರ್ಮ ಸಮ್ಮೇಳನ'ದಲ್ಲಿ ಸ್ವಾಮಿ ವಿವೇಕಾನಂದರು ಭಾರತದ ಪ್ರತಿನಿಧಿಯಾಗಿ ಭಾಷಣ ಮಾಡಿ, ಜನಮನಗಳನ್ನು ಗೆದ್ದರು. ಭಾರತದ ಬಗ್ಗೆ ಇದ್ದ ತಪ್ಪುಕಲ್ಪನೆಗಳನ್ನು ಪಾಶ್ಚಾತ್ಯರ ಮನಸ್ಸಿನಿಂದ ತೊಡೆದು ಹಾಕಿದರು. ಭಾರತದ ಹಿರಿಮೆ, ಗರಿಮೆಗಳನ್ನು ಸಾರಿದರು. ಅವರ ಉಜ್ವಲ ಭಾಷಣಗಳು ಇಡೀ ವಿಶ್ವವೇ ತಲೆದೂಗುವಂತೆ ಮಾಡಿದವು. ಮುಂದೆ ಸ್ವಾಮೀಜಿಯವರು ಯೂರೋಪು ಪ್ರವಾಸವನ್ನು ಕೈಗೊಂಡರು. ಅವರಿಗೆ ಅದ್ಭುತ ಸ್ವಾಗತ ದೊರೆಯಿತು. ಮಾರ್ಗರೆಟ್‌ಗೆ ಈ ವಿಷಯ ಗೊತ್ತಿದ್ದರೂ ಆಕೆ ಉದಾಸೀನದಿಂದಿದ್ದಳು. ಏಕೆಂದರೆ ಅವಳು ಕ್ರೈಸ್ತಧರ್ಮವನ್ನು ಒಪ್ಪಿಕೊಂಡಿದ್ದಳು. ಆದರೂ ಅವಳ 'ಸತ್ಯಾನ್ವೇಷಣೆ'ಗೆ ಸರಿಯಾದ ಮಾರ್ಗದರ್ಶಿಗಳು ಸಿಕ್ಕಿರಲಿಲ್ಲ. ಹಾಗಾಗಿ ಯಾವ ಧರ್ಮ ಪ್ರಚಾರಕರ ಬಗ್ಗೆಯೂ ಆಕೆ ಉತ್ಸುಕಳಾಗಿರಲಿಲ್ಲ. ಒಮ್ಮೆ ಅವಳು ಗೆಳತಿಯ ಒತ್ತಾಯಕ್ಕಾಗಿ ಸ್ವಾಮೀಜಿಯ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಳು. ಸ್ವಾಮೀಜಿಯವರ ವ್ಯಕ್ತಿತ್ವ, ಅವರ ಮಾತಿನ ರೀತಿ, ಉಪನ್ಯಾಸದ ನಡುನಡುವೆ ಭಾರತದ ಬಗೆಗಿನ ಸಣ್ಣಪುಟ್ಟ ಕತೆಗಳ ಮೂಲಕ ಹೇಳುವ ನೀತಿ, ನ್ಯಾಯ, ಧರ್ಮಗಳ ಪ್ರತಿಪಾದನೆ ಇತ್ಯಾದಿಗಳೂ ಮೆಚ್ಚಿಗೆಯಾದವು. ನಂತರ ಸ್ವಾಮೀಜಿಯವರ ಭಾಷಣ ಎಲ್ಲೇ ನಡೆದರೂ ಅವಳು ತಪ್ಪಿಸಿಕೊಳ್ಳುತ್ತಿರಲಿಲ್ಲ. ಅವಳಿಗೆ ಸಹಜವಾದ ಸಂದೇಹಗಳನ್ನು ಅದುಮಿಡಲಾರದೆ, ಪ್ರಶ್ನೆಗಳನ್ನು ಕೇಳುತ್ತಿದ್ದಳು, ಅವುಗಳಿಗೆ ಸೂಕ್ತವಾದ ಪರಿಹಾರವನ್ನು ಪಡೆಯುತ್ತಿದ್ದಳು. ಸ್ವಾಮೀಜಿಯವರಿಗೂ ಈ ರೀತಿಯ ಅಡ್ಡ ಪ್ರಶ್ನೆಗಳು ಬಹಳ ಪ್ರಿಯವಾಗಿರುತಿತ್ತು. ಏಕೆಂದರೆ ಸ್ವಾಮೀಜಿಯವರು ತಮ್ಮ ಗುರುವನ್ನು ಸ್ವೀಕರಿಸಿದ್ದು ಈ ರೀತಿಯ ವಾಗ್ವಾದಗಳಿಂದಲೇ ಅಲ್ಲವೆ?

ಮಾರ್ಗರೆಟಳ ಜೀವನದ ಮಾರ್ಗ ಸುಗಮವಾಯಿತು. ಸ್ವಾಮೀಜಿಯವರನ್ನು 'ಗುರು' ವೆಂದು ಮನಸಾ ಸ್ವೀಕರಿಸಿದಳು. ಸ್ವಾಮೀಜಿಯವರ ರಾಷ್ಟ್ರಪ್ರೇಮ, ರಾಷ್ಟ್ರಪ್ರಜ್ಞೆ ಇವಳ ಮನೋಭಾವನೆಗೆ ಪ್ರೋತ್ಸಾಹ ನೀಡುತ್ತಿದ್ದವು. ಭಾರತದ ಮಹಿಮೆಯನ್ನು ಅರಿತ ಅನೇಕ ಪಾಶ್ಚಾತ್ಯರು ಸ್ವಾಮೀಜಿಯವರನ್ನು ಅನುಸರಿಸಿ ಭಾರತದ ಸೇವೆಗೆ ಸಿದ್ಧರಾದರು. ಮಾರ್ಗರೆಟ್ ಸಹ ತನ್ನ ಮುಂದಿನ ಬದುಕನ್ನು ಭಾರತದ ಸೇವೆಗೆ ಮುಡಿಪಾಗಿಟ್ಟಳು. ಈ ನಿರ್ಣಯಕ್ಕೆ ಬರಬೇಕಾದರೆ ಅವಳು ಅಂತರ್ಯುದ್ಧದಲ್ಲಿ ದೃಢವಾಗಿ ಹೋರಾಡಬೇಕಾಯಿತೆನ್ನುವುದರಲ್ಲಿ ಸಂಶಯವಿಲ್ಲ. ಸ್ವಾಮೀಜಿಯವರಿಗೂ ಮಾರ್ಗರೆಟ್ ವ್ಯಕ್ತಿತ್ವ ಮೆಚ್ಚುಗೆಯಾಯಿತು. ಆದರೆ ಅವಳಿಂದ ಭಾರತಕ್ಕೆ ವಿಶೇಷವಾಗಿ ಮಹಿಳೆಯರ ಉನ್ನತಿ ಮತ್ತು ಶಿಕ್ಷಣದ ಪ್ರಗತಿಯಾಗಬೇಕೆಂದು ಸ್ವಾಮೀಜಿ ನಿರೀಕ್ಷಿಸಿದ್ದರೂ, ಅದು ಭಾರತೀಯರ ಬಗ್ಗೆ ಅನುಕಂಪೆಯಿಂದ, ಅಥವಾ ಸಹಾಯರೂಪದಿಂದ ಕೂಡಿರಬಾರದೆನ್ನುವ ಅಭಿಪ್ರಾಯ ಸ್ವಾಮೀಜಿಯವರದಾಗಿತ್ತು. ಆ ರೀತಿಯ ಸೇವೆ 'ಭಿಕ್ಷೆ' ಆಗುತ್ತದೆ ಅಷ್ಟೆ. ಇದನ್ನು ಮಾರ್ಗರೆಟ್‌ಳಿಗೆ ವಿವರಿಸಿದರು. ''ಸಂಪೂರ್ಣ ಭಾರತೀಯಳಾಗಿ ಭಾರತಕ್ಕೆ ಸೇವೆ ಸಲ್ಲಿಸುವ ಒಪ್ಪಿಗೆ ಇದ್ದರೆ, ಖಂಡಿತವಾಗಿಯೂ ನಿನ್ನನ್ನು ಸ್ವಾಗತಿಸುತ್ತೇನೆ'' ಎಂದರು ಸ್ವಾಮೀಜಿ. ಭಾರತೀಯರ ಮಧ್ಯೆ ಜೀವಿಸಬೇಕಾದರೆ ಎದುರಾಗುವ ಕಷ್ಟನಿಷ್ಠುರಗಳನ್ನೆಲ್ಲಾ ಅವರು ತಿಳಿಸಿದರು. ಮಾರ್ಗರೆಟ್ ಧೀರೆ. ಒಮ್ಮೆ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿದ್ದನ್ನು ಎಷ್ಟೇ ಅಡಚಣೆಗಳು ಎದುರಾದರೂ ಪೂರೈಸುವ ದೃಢಚಿತ್ತ ಉಳ್ಳವಳು. ಗುರುವಿಗೆ ತಕ್ಕ ಶಿಷ್ಯೆ!

ಸ್ವಾಮೀಜಿಯರ ಅಭೀಷ್ಟದಂತೆ 'ಭಾರತೀಯತೆ'ಯ ದೀಕ್ಷೆ ಸ್ವೀಕರಿಸಿದಳು. ಭಾರತಕ್ಕೆ ಸ್ವಾಮೀಜಿಯವರ ಜೊತೆ ಬಂದಳು. ಇಲ್ಲಿಯವರೆಗಿನ ಅವಳ ಬದುಕಿಗೆ, ಪೂರ್ವದಿಕ್ಕಿನ ಭಾರತದ ರೀತಿ, ನೀತಿ ಆಚಾರ-ವ್ಯವಹಾರ ತೀರ ವಿರುದ್ಧವಾಗಿದ್ದವು. ಸ್ವಾಮೀಜಿಯವರ ಪ್ರೋತ್ಸಾಹದಿಂದ ಎಲ್ಲವನ್ನೂ ಸಹನೆಯಿಂದ ಸ್ವೀಕರಿಸಿದಳು. ಅವಳ ಸಂಕಲ್ಪ ದೃಢವಾಗಿತ್ತು. ಆಗೊಮ್ಮೆ ಈಗೊಮ್ಮೆ ಸ್ವಾಮೀಜಿಯವರಿಗೂ ಮಾರ್ಗರೆಟ್‌ಳಿಗೂ ವಾಗ್ವಾದಗಳಾಗುತ್ತಿದ್ದವು. ಸ್ವಾಮೀಜಿಯವರ ರಾಷ್ಟ್ರಪ್ರೇಮ ಅವಳನ್ನು ಎಚ್ಚರಗೊಳಿಸುತ್ತಿತ್ತು. ನಿವೇದಿತಾ ಭಾರತವನ್ನು ಪ್ರೀತಿಸಿದಳು. ಸ್ವಾಮೀಜಿಯವರಿಗೂ ಇವಳ ಪರಿಸ್ಥಿತಿ ಅರ್ಥವಾಯಿತು. ಅವರು ಉತ್ತರ ಭಾರತದ ತೀರ್ಥಯಾತ್ರೆಗೆ ಕೆಲವರೊಡನೆ ಹೊರಟರು. ಮಾರ್ಗರೆಟ್‌ಗೆ ಬಹಳ ಆನಂದವಾಗಿತ್ತು. ಅವಳಲ್ಲಿದ್ದ ಅಲ್ಪಸ್ವಲ್ಪ ಪಾಶ್ಚಾತ್ಯ ಭಾವನೆಯನ್ನೂ ನಾಶಮಾಡುವ ರೀತಿಯಲ್ಲಿ, ಆಲ್ಮೋರದಲ್ಲಿ ಸ್ವಾಮೀಜಿಯವರ ಅಗ್ನಿಪರೀಕ್ಷೆಗೆ ಒಳಗಾದಳು. ಅದರಲ್ಲಿ ಆಕೆ ಗೆದ್ದಳು! ಸ್ವಾಮೀಜಿ ಅವಳನ್ನು 'ನಿವೇದಿತಾ' ಎಂದು ಕರೆದರು. ಭಗವದ್ಗೀತೆಯ ವಾಣಿಯಂತೆ, 'ಸಂಪೂರ್ಣ ಶರಣಾದವರ ರಕ್ಷಣೆ ಭಗವಂತನದು'. ನಿವೇದಿತಾ ಸಂಪೂರ್ಣವಾಗಿ ಭಾರತಮಾತೆಗೆ ಒಪ್ಪಿಸಿಕೊಂಡಳು. ಇದು ಅವಳ ಪುನರ್ಜನ್ಮ. ಅವಳೇ ಹೇಳಿಕೊಂಡಿದ್ದಾಳೆ. ''ಇದು ನನ್ನ ಎರಡನೇ ಜನ್ಮ. ಭಾರತ ನನ್ನ ಆಧ್ಯಾತ್ಮಿಕ ಜನ್ಮಭೂಮಿ'' ಎಂದು. ಮುಂದೆ ಅವಳು ಭಾರತಮಾತೆಗಾಗಿ ಸಲ್ಲಿಸಿದ ಸೇವೆ, ಭಾರತೀಯರೇ ಹುಬ್ಬೇರಿಸುವಂತೆ ಮಾಡಿದೆ.

ನಿವೇದಿತಾ ಪೂರ್ವ ನಿಶ್ಚಯದಂತೆ ಕೊಲ್ಕತ್ತಾದಲ್ಲಿ ಮಹಿಳೆಯರ ಉನ್ನತಿಗಾಗಿ, ಶಿಕ್ಷಣಕ್ಕಾಗಿ ನಾನಾ ರೀತಿಯಲ್ಲಿ ದುಡಿದಳು. ಎದುರಾದ ಕಷ್ಟಗಳನ್ನು ಹೋರಾಟದಿಂದ ಗೆದ್ದಳು ಎನ್ನುವುದಕ್ಕಿಂತ ಪ್ರೀತಿಯಿಂದ, ಸಹನೆಯಿಂದ, ಸೇವಾಕಾರ್ಯಗಳಿಂದ ಗಣ್ಯವ್ಯಕ್ತಿಗಳೊಡನೆ ಗುರುತಿಸಿಕೊಳ್ಳುವ ಮೂಲಕ ಅದನ್ನೆದುರಿಸಿದಳು ಎನ್ನ

ಬೇಕು. ಅವಳ ಭಾಷಣವೂ ಆ ರೀತಿಯಲ್ಲಿ ಆಕರ್ಷಕವಾಗಿರುತ್ತಿತ್ತು. ಸ್ವಾಮೀಜಿಯವರ ರಾಷ್ಟ್ರಪ್ರೇಮ ಅವಳನ್ನು ಆ ರೀತಿ ಎಚ್ಚರಿಸುತ್ತಿತ್ತು. ಸ್ವತಂತ್ರ ಮನೋಭಾವವುಳ್ಳ ನಿವೇದಿತಾ, ಭಾರತದ ರಾಜಕೀಯ ಪರಿಸ್ಥಿತಿಯನ್ನೂ ಗಮನಿಸುತ್ತಿದ್ದಳು. ೧೯೦೨ ರಲ್ಲಿ ಸ್ವಾಮೀಜಿಯವರ ಮಹಾಸಮಾಧಿಯ ನಂತರ ನಿವೇದಿತಾಳಲ್ಲಿ ಭಾರತದ ಬಗ್ಗೆ ಮನಸ್ಸಿನಲ್ಲಿ ಹೋರಾಟ ನಡೆಯಿತು. ಬ್ರಿಟಿಷರ ದಾಸ್ಯದಲ್ಲಿ ಭಾರತೀಯರಿಗೆ ಆಗುತ್ತಿದ್ದ ಅಪಮಾನಗಳು ಇವಳಿಗೆ ಅಸಹನೀಯವಾಗಿದ್ದಿತು.

ಇವಳು ಭಾರತಕ್ಕೆ ಬಂದಿಳಿದಾಗ ಬ್ರಿಟಿಷರ ಹಿಡಿತದಿಂದ ಮುಕ್ತರಾಗಲು, ದೇಶವನ್ನು ಸ್ವತಂತ್ರವನ್ನಾಗಿ ಮಾಡಲು ಕೆಲವು ರಾಷ್ಟ್ರಪ್ರೇಮಿಗಳು, 'ನ್ಯಾಷನಲ್ ಕಾಂಗ್ರೆಸ್' ಎಂಬ ಸಂಸ್ಥೆಯ ಹೆಸರಿನಲ್ಲಿ ಹೋರಾಡುತ್ತಿದ್ದರು. ೧೮೫೭ರಲ್ಲಿ ಪ್ರಾರಂಭವಾದ ಭಾರತ ಸ್ವಾತಂತ್ರ್ಯ ಸಂಗ್ರಾಮವನ್ನು ಅನುಸರಿಸಿ, ಬ್ರಿಟಿಷರ ದಬ್ಬಾಳಿಕೆಯನ್ನು ಖಂಡಿಸುತ್ತಿದ್ದರು. ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ 'ನ್ಯಾಷನಲ್ ಕಾಂಗ್ರೆಸ್' ಕಾರ್ಯ ಚಟುವಟಿಕೆ ನಡೆಸುತ್ತಿತ್ತು. ಅಹಿಂಸೆಯ ಮೂಲಕ, ಭಾರತವನ್ನು ಸ್ವತಂತ್ರವನ್ನಾಗಿ ಮಾಡಲು ಉದ್ದೇಶಿಸಿದ್ದರು. ಭಾರತದಲ್ಲಿ ಇದಕ್ಕೆ ತಕ್ಕ ಪ್ರೋತ್ಸಾಹವೂ ಸಿಕ್ಕಿತ್ತು. ಈ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಿವೇದಿತಾಳ ಕೊಡುಗೆ ಅಮೂಲ್ಯವಾದದ್ದು. ಇವಳ ಸ್ವತಂತ್ರ ಮನೋಭಾವ ವ್ಯಷ್ಟಿಯಿಂದ ಸಮಷ್ಟಿಯೆಡೆಗೆ ವಿಸ್ತರಿಸಿತು. ಹಿಂದೆ ತನ್ನ ಮಾತೃಭೂಮಿಯಾದ ಇಂಗ್ಲೆಂಡನ್ನು ಎಷ್ಟು ಪ್ರೀತಿಸುತ್ತಿದ್ದಳೋ ಅದಕ್ಕಿಂತ ಹೆಚ್ಚಾಗಿ ಭಾರತವನ್ನು ಪ್ರೀತಿಸಿದಳು. ಕಾರಣವಿಷ್ಟೆ, ಅವಳು ಭಾರತದ ಮಹತ್ವವನ್ನು ಅರಿತಿದ್ದಳು. ಸ್ವಾಮೀಜಿಯವರ ಆಧ್ಯಾತ್ಮಿಕ ಪುತ್ರಿಯಾಗಿ ಭಾರತದ ಹಿತವನ್ನೇ ಲಕ್ಷ್ಯವಾಗಿಟ್ಟುಕೊಂಡಿದ್ದಳು. ಭಾರತದಲ್ಲಿ ಬ್ರಿಟಿಷರ ದಬ್ಬಾಳಿಕೆಯನ್ನು ನಿವೇದಿತಾ ಕಣ್ಣಾರೆ ಕಂಡಳು, ಉದ್ರಿಕ್ತಳಾದಳು. ಹಿಂದೆ ಸ್ವಾಮೀಜಿಯವರು ಯೂರೋಪಿನ ಪ್ರವಾಸದಲ್ಲಿದ್ದಾಗ, ಬ್ರಿಟಿಷರಿಂದ ಭಾರತಕ್ಕೆ ಅನೇಕ ರೀತಿಯಲ್ಲಿ ಉಪಕಾರವಾಗುತ್ತಿದೆ ಯೆಂಬ ಅಭಿಪ್ರಾಯವನ್ನು ಅವಳು ವ್ಯಕ್ತಪಡಿಸಿದಾಗ, ಸ್ವಾಮೀಜಿ ಸಿಡಿದೆದ್ದರು. ಅವಳಿಗೆ ಕಟುವಾದ ಮಾತುಗಳಿಂದ, ಅವಳ ಅಭಿಪ್ರಾಯವನ್ನು ಖಂಡಿಸುತ್ತಾ ಉತ್ತರವಿತ್ತರು. ಅದು ಅವಳ ಸ್ವತಂತ್ರ ಮನೋಭಾವಕ್ಕೆ ಧಕ್ಕೆಯನ್ನುಂಟುಮಾಡಿತ್ತು. ಆದರೆ ಈಗ ಸ್ವತಃ ಭಾರತದಲ್ಲಿ, ಭಾರತೀಯರಿಗೆ ಬ್ರಿಟಿಷರಿಂದ ಆಗುತ್ತಿದ್ದ ಕಿರುಕುಳ, ಅಪಮಾನವನ್ನು ಕಂಡು ಅವಳು ಕಿಡಿಕಾರಿದಳು.

ಸ್ವಾಮೀಜಿಯವರ ಮಹಾಸಮಾಧಿಯ ನಂತರ ಒಂದು ನಿರ್ಣಯಕ್ಕೆ ಬಂದಳು. ಸ್ವಾಮೀಜಿಯವರ ಅಪೇಕ್ಷೆಯಂತೆ ಸಾಮಾಜಿಕ ಸೇವಾಕ್ಷೇತ್ರದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಳು. ಆದರೆ ಅವಳಿಗೆ ಭಾರತೀಯರ ಮನಸ್ಸಿನಲ್ಲಿ ಆಳವಾಗಿ ಊರಿದ್ದ ದಾಸ್ಯಭಾವವನ್ನು ತೊಲಗಿಸಿ, 'ಇದು ನನ್ನ ದೇಶ, ನನ್ನ ಮಾತೃಭೂಮಿ' ಎನ್ನುವ ರಾಷ್ಟ್ರಪ್ರಜ್ಞೆಯನ್ನು ಜಾಗೃತಗೊಳಿಸಬೇಕು ಎನ್ನುವ ಸಂಕಲ್ಪಕ್ಕೆ ಸಿದ್ಧಳಾದಳು. ಸ್ವಾಮೀಜಿಯವರ ರಾಷ್ಟ್ರಪ್ರಜ್ಞೆ, ರಾಷ್ಟ್ರಪ್ರೇಮವನ್ನು ಮೆಚ್ಚಿ ಭಾರತಕ್ಕೆ ಬಂದವಳಲ್ಲವೆ! ಯಾವ ಕೆಲಸ ಮಾಡಿದರೆ ಸ್ವಾಮೀಜಿಯವರ ಉದ್ದೇಶಕ್ಕೆ ಭಂಗ ಬಾರದು ಎಂದು ಯೋಚಿಸಿ, ಸ್ವಾತಂತ್ರ್ಯ ಸಂಗ್ರಾಮದ ಹೋರಾಟಕ್ಕೆ, ರಾಜಕೀಯವಾಗಿ ಪದಾರ್ಪಣ ಮಾಡಿದಳು. ಇದಕ್ಕಾಗಿ ರಾಮಕೃಷ್ಣ ಮಹಾಸಂಘದ ಸದಸ್ಯತ್ವವನ್ನೇ ಬಿಟ್ಟಳು. ಆದರೆ ಸಂಘದ ಸಂಬಂಧ ಅವಳ ಉಸಿರು ಇರುವವರೆಗೂ ಗಟ್ಟಿಯಾಗಿತ್ತು. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ಅವಳ ಹುಟ್ಟುಗುಣವಾಗಿತ್ತು.

'ನ್ಯಾಷನಲ್ ಕಾಂಗ್ರೆಸ್' ನವರ ಸ್ವಾತಂತ್ರ್ಯ ಸಂಗ್ರಾಮ ಅಹಿಂಸಾತ್ಮಕವಾಗಿತ್ತು. ಈ ಮಂದಗಾಮಿಗಳ ಕಾರ್ಯಗಳು ಅವಳಿಗೆ ಒಪ್ಪಿಗೆಯಾಗಲಿಲ್ಲ. ಆದರೆ ಅದನ್ನು ತಿರಸ್ಕರಿಸಲಿಲ್ಲ, ಪುರಸ್ಕರಿಸಿದಳು. 'ಭಾರತದ ಆಧ್ಯಾತ್ಮಿಕತೆಗೆ ಇದು ಸೂಕ್ತವೇ' ಎಂದುಕೊಂಡು ಆ ಗುಂಪಿನವರನ್ನು ಗೌರವಿಸಿದಳು, ಪ್ರೀತಿಸಿದಳು. ಮುಂದೆ ಕಾಂಗ್ರೆಸ್ ನಲ್ಲಿಯೇ ಬಿರುಕುಂಟಾಯಿತು. ಕ್ರಾಂತಿಕಾರಿ ಮನೋಭಾವವುಳ್ಳವರು ಮಂದಗಾಮಿ ಗುಂಪನ್ನು ವಿರೋಧಿಸಿದರು. ಈ ತೆರನಾದ ಬಿರುಕು ಸಂಸ್ಥೆಯ ಬೆಳವಣಿಗೆಗೆ ಒಳ್ಳೆಯದಲ್ಲ ಎಂದು ನಿವೇದಿತಾಗೆ ಅನ್ನಿಸಿದರೂ, ಅವಳ ಕ್ಷಾತ್ರ ಸ್ವಭಾವ ತೀವ್ರಗಾಮಿಗಳ ಕಡೆಗೆ ಒಲಿಯಿತು. ಇವಳಿಗೆ ಉಪನ್ಯಾಸದಲ್ಲಿ ಜನರನ್ನು ಬಡಿದೆಬ್ಬಿಸುವ ಓಜಸ್ಸು ಇತ್ತು. ಯುವಕರನ್ನು ಆಕರ್ಷಿಸುವ ತೇಜಸ್ಸೂ ಇತ್ತು. ಮನೆಮನೆಗೂ ಹೋಗಿ ಸ್ವಾತಂತ್ರದ ಕಿಡಿಯನ್ನು ಹೊತ್ತಿಸುವ ಶಕ್ತಿ ಇತ್ತು. ಕೊಲ್ಕತ್ತಾದಲ್ಲಿ ತನ್ನ ಸೇವಾಕಾರ್ಯಗಳಿಂದ ಎಲ್ಲರನ್ನೂ ಆಕರ್ಷಿಸಿದ್ದಳು. ಮಹಿಳೆಯರಂತೂ ಈಕೆಯನ್ನು ತಮ್ಮವರಲ್ಲಿ ಒಬ್ಬಳೆಂದೇ ಭಾವಿಸಿದ್ದರು. ಇವಳ ಭಾರತೀಯತೆಯಲ್ಲಿ ಶುದ್ಧತೆ ಇತ್ತು. ಅನಾವಶ್ಯಕವಾಗಿ ಯಾರಾದರೂ ಇಂಗ್ಲೀಷನಲ್ಲಿ ಮಾತನಾಡಿಸಿದರೆ ಸಿಡಿದೇಳುತ್ತಿದ್ದಳು. ಒಮ್ಮೆ ಆರ್ಯಸಮಾಜದವರೊಬ್ಬರು 'ಮೇಡಂ ಸಾಹಿಬಾ' ಎಂದು ಕರೆದದ್ದನ್ನು ಕೇಳಿ ನಿವೇದಿತಾ ಕೆರಳಿದಳು. ಅವಳ ನಡೆ-ನುಡಿ ಎಲ್ಲದರಲ್ಲೂ ನೂರಕ್ಕೆ ನೂರರಷ್ಟು ಭಾರತೀಯತೆ! ನಂತರ ಹೇಳುತ್ತಾಳೆ ''ತಾವು 'ಸೋದರಿ' ಎಂದು ಕರೆದರೆ ಬಹಳ ಸಂತೋಷ'' ಎಂದು.

ಶತಶತಮಾನಗಳ ಪರಕೀಯರ ದಾಸ್ಯದಲ್ಲಿಯೇ ಬದುಕು ಸಾಗಿಸುತ್ತಿದ್ದ ಭಾರತೀಯರ ಶೋಚನೀಯ ಸ್ಥಿತಿಗೆ ನಿವೇದಿತಾಳ ಮನಸ್ಸು ಪ್ರಕ್ಷುಬ್ಧಗೊಂಡಿತ್ತು. ಪ್ರಸ್ತುತ ಬ್ರಿಟಿಷರಿಂದ ಭಾರತೀಯರಿಗೆ ಆಗುತ್ತಿದ್ದ ಹಿಂಸೆ, ಅಪಮಾನಗಳನ್ನು ಕಂಡು ರೋಸಿ ಹೋಗಿದ್ದಳು. ಅದಕ್ಕಾಗಿ ಅವಳು ತನ್ನ ಕಾರ್ಯಚಟುವಟುಕೆಗಲ್ಲಿ, ಅದರಲ್ಲಿಯೂ ''ಸ್ವಾತಂತ್ರ್ಯ ಸಂಗ್ರಾಮದ'' ಹಿನ್ನೆಲೆಯಲ್ಲಿ ಪ್ರಥಮವಾಗಿ ಭಾರತೀಯರಲ್ಲಿ ರಾಷ್ಟ್ರಪ್ರಜ್ಞೆಯನ್ನು ಮೂಡಿಸುವುದಕ್ಕೆ ಆದ್ಯತೆ ಕೊಟ್ಟಳು. 'ಇದು ನಮ್ಮ ದೇಶ; ಇದು ನಮ್ಮ ಹಕ್ಕು' ಎನ್ನುವುದನ್ನು ಪ್ರತಿ ಭಾರತೀಯನಲ್ಲೂ ದೃಢಪಡಿಸಬೇಕು ಎನ್ನುವ ನಿಲುವು ನಿವೇದಿತಾಳದಾಗಿತ್ತು. ಇವಳ ಭಾವನೆಗೆ ಪುಷ್ಟಿ ನೀಡುವಂತೆ ೧೯೦೨ ರಲ್ಲಿ ದೆಹಲಿಯಲ್ಲಿ ನಡೆದ ದರ್ಬಾರಿಗಾಗಿ ಖರ್ಚುಮಾಡಿದ ಹೇರಳವಾದ ಹಣದ ಬಗ್ಗೆ, ರಾಷ್ಟ್ರಪ್ರೇಮಿಗಳು (ಕಾಂಗ್ರೆಸ್) ಖಂಡಿಸಿದರು. ನಿವೇದಿತಾಳಿಗೆ ಇದು ಸಂತೋಷದ ವಿಷಯವಾಗಿತ್ತು. ಆಡಳಿತಗಾರರಾಗಿದ್ದ ಬ್ರಿಟಿಷರು ತಮ್ಮನ್ನು ಎದುರಿಸುವವರೇ ಇಲ್ಲವೆಂದು ಸೊಕ್ಕಿ ಮೆರೆಯುತ್ತಿದ್ದವರಿಗೆ ಸ್ವಾತಂತ್ರ್ಯ ಸಂಗ್ರಾಮದ ಬಿಸಿ ತಗಲುವಂತೆ ಮಾಡಿದರು. ಬ್ರಿಟಿಷರ ವಿರುದ್ಧ ಗುಡುಗಿದರು. ಇನ್ನೊಂದು ಘಟನೆ ನಿವೇದಿತಾಳನ್ನು ಕೆರಳಿಸಿದ್ದು ಲಾರ್ಡ್ ಕರ್ಜನ್

ನಿಯಮಿಸಿದ 'ಯೂನಿವರ್ಸಿಟಿ ಕಮಿಷನ್'. ಇದರಲ್ಲಿ ಒಬ್ಬನೇ ಒಬ್ಬನಾದರೂ ಭಾರತೀಯ ಸದಸ್ಯನಿರಲಿಲ್ಲ. ತೀವ್ರ ಪ್ರತಿಭಟನೆಯ ನಂತರ ಜಸ್ಟಿಸ್ ಗುರುದಾಸ್ ಬ್ಯಾನರ್ಜಿಯವರನ್ನು ಸದಸ್ಯರನ್ನಾಗಿ ಸೇರಿಸಿಕೊಂಡರು. ಈ ಕಮಿಷನ್ ಆಧಾರದದ ಮೇಲೆ ೧೯೦೪ರಲ್ಲಿ 'ಯೂನಿವರ್ಸಿಟಿ ಆ್ಯಕ್ಟ್' ಜಾರಿಗೆ ಬಂತು.

ಭಾರತೀಯರನ್ನು ಜಾಗೃತಗೊಳಿಸುವ ಸಲುವಾಗಿ ಅವಳು ಬರೆದ ಪತ್ರ ಹೀಗಿದೆ: ''ಯೂನಿವರ್ಸಿಟಿ ಕಮಿಷನ್ ಮೂಲಕ ಭಾರತದ ಎಲ್ಲಾ ಶಿಕ್ಷಣದ ವಿಭಾಗಗಳನ್ನು ಮೂಲೆಗುಂಪು ಮಾಡಲಾಗುತ್ತಿದೆ. ಈ ದ್ರೋಹ ನನ್ನಲ್ಲಿ ಕಿಚ್ಚು ಹಚ್ಚಿದಂತಾಗಿದೆ. ಭಾರತ ಭಾರತವಾಗಿರುವ ಹಕ್ಕು, ಭಾರತಕ್ಕಿರುವ ಜ್ಞಾನದ ಹಕ್ಕು, ಇದನ್ನು ಕಸಿಯುವುದು ದ್ರೋಹ. ಇದು ಬ್ರಿಟಿಷ್ ಆಡಳಿತದ ವಿರುದ್ಧ ನನ್ನನ್ನು ಕೆರಳಿಸುತ್ತಿದೆ.'' 'ಯೂನಿವರ್ಸಿಟಿ ಆ್ಯಕ್ಟ್' ಅನ್ನು ವಿರೋಧಿಸಿದವರಲ್ಲಿ ಅತ್ಯಂತ ಪ್ರಮುಖ ವ್ಯಕ್ತಿ ರಾಸ್‌ಬಿಹಾರಿ ಘೋಷ್. ಇವರು 'ಆ್ಯಕ್ಟ್' ನ ವಿರೋಧವಾಗಿ ಕರಪತ್ರಗಳನ್ನು ರಚಿಸಿ ಹಂಚಿದರು. ಈ ಪತ್ರದ ರಚನೆಯಲ್ಲಿ ನಿವೇದಿತಾಳ ಪಾತ್ರ ವಿಶೇಷವಾಗಿತ್ತು. ಸಮಾಜದ ಅನೇಕ ನಾಯಕರು, ಯುವಜನರನ್ನು ಕಲೆಹಾಕಿ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ತೊಡಗಿಸುವ ಯೋಜನೆ ಹಾಕಿಕೊಂಡರು. ಇದರ ಪರಿಣಾಮವಾಗಿ 'ಯಂಗ್ ಮೆನ್ಸ್ ಹಿಂದೂ ಯೂನಿಯನ್ ಕಮಿಟಿ', 'ದ ಗೀತಾ ಸೊಸೈಟಿ', 'ದ ಡಾನ್ ಸೊಸೈಟಿ', 'ಅನುಶೀಲನ ಸಮಿತಿ', 'ದ ವಿವೇಕಾನಂದ ಸೊಸೈಟಿ' ಮುಂತಾದ ಸಂಸ್ಥೆಗಳು ತಲೆ ಎತ್ತಿದವು. ಇವೆಲ್ಲವುಗಳ ಸಂಪರ್ಕ ನಿವೇದಿತಾಳೊಂದಿಗೆ ಬೆಸೆದುಕೊಂಡಿತ್ತು. ಈ ಸಂಘಟನೆಗಳ ಮೂಲಕ ಆಕೆ ತನ್ನ ಉಜ್ವಲ ಲೇಖನ, ಭಾಷಣಗಳಿಂದ ಎಲ್ಲ ಭಾರತೀಯರನ್ನು ಜಾಗೃತಗೊಳಿಸುತ್ತಿದ್ದಳು. ಅವಳ ಪ್ರತಿಯೊಂದು ಲೇಖನ, ಭಾಷಣಗಳಲ್ಲಿ ರಾಷ್ಟ್ರೀಯತೆಯ ಭಾವವೇ ತುಂಬಿರುತ್ತಿದ್ದವು. ''ಕರಪತ್ರಗಳನ್ನು ತಾನೇ ಖುದ್ದಾಗಿ ಬೀದಿ, ಬೀದಿಗಳಲ್ಲಿ ಮನೆ, ಮನೆಗಳಿಗೆ ಹೋಗಿ ಹಂಚುತ್ತಿದ್ದ ದೃಶ್ಯ ಸರ್ವೇಸಮಾನ್ಯವಾಗಿತ್ತು'' ಎಂದು ಅವಳ ಕಾರ್ಯವನ್ನು ಆ ಸಂಸ್ಥೆಗಳ ಸದಸ್ಯರು ಶ್ಲಾಘಿಸುತ್ತಿದ್ದರು. ಆಹ್ವಾನ ಬಂದಾಗಲೆಲ್ಲಾ ಈ ಸಂಸ್ಥೆಗಳಿಗೆ ಹೋಗಿ ಹಿಂದೂಧರ್ಮ, ಭಗವದ್ಗೀತೆ, ಸ್ವಾಮಿ ವಿವೇಕಾನಂದ ಮುಂತಾದ ವಿಷಯಗಳನ್ನು ಕುರಿತು ಮಾತನಾಡುತ್ತಿದ್ದಳು. ಸುದೀರ್ಘ ಚಿಂತನ–ಮಂಥನಗಳ ಪರಿಣಾಮವಾಗಿ, ಅವಳ ಭಾವನೆಗಳು ಜೀವಂತ ಶಕ್ತಿಯಾದವು, ಸಮಯ, ಸಂದರ್ಭಗಳನ್ನು ಉಪಯೋಗಿಸಿಕೊಂಡು ಯುವಕರಲ್ಲಿ ರಾಷ್ಟ್ರ, ರಾಷ್ಟ್ರೀಯತೆ, ರಾಷ್ಟ್ರಪ್ರಜ್ಞೆಯನ್ನು ಉತ್ತೇಜಿಸುತ್ತಿದ್ದಳು. ಅವಳಿಗೆ ಇದು ಹಗಲಿರುಳಿನಲ್ಲಿ ಜಪಿಸುವ ಮಂತ್ರವಾಗಿದ್ದಿತು. ರಾಷ್ಟ್ರ ಪ್ರಜ್ಞೆಯನ್ನು ಜಾಗೃತಗೊಳಿಸಿದವಳೇ ನಿವೇದಿತಾ ಎನ್ನಬಹುದು. ಎಫ್. ಜೆ. ಅಲೆಕ್ಸಾಂಡರ್, ''ಆಧುನಿಕ ಭಾರತದ ಧುರೀಣರ ಪೈಕಿ ನಿವೇದಿತಾಳಲ್ಲಿ ಇದ್ದಂತಹ ಭಾರತದ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನೂ, ಅಂತಹ ಕಾರ್ಯನಿರ್ವಹಣೆಯ ಅಪಾರ ಶಕ್ತಿಯನ್ನೂ ಹೊಂದಿದ್ದ ಇನ್ನೊಬ್ಬ ವ್ಯಕ್ತಿಯನ್ನು ಕಾಣಲಾರೆವು. ಆಕೆ ಹದಿನಾಲ್ಕು ವರ್ಷ ತನ್ನ ಚೇತನವನ್ನು ದೇಶದೊಡನೆ ಒಂದಾಗಿಸಲು ಪ್ರಯತ್ನಿಸಿದಳು. ಭಾರತೀಯ ಅನುಭವದ ಮೂಲೆ ಮೂಲೆಯನ್ನು ಹೊಕ್ಕು ಅದರ ಶ್ರೇಷ್ಠತೆಯ ಪ್ರಮಾಣವನ್ನು ಹುಡುಕಿದಳು. ಇದರ ಪ್ರತಿಫಲವಾಗಿ 'ರಾಷ್ಟ್ರಪ್ರಜ್ಞೆ' ಎಂಬ ಶಬ್ದ ರೂಪುಗೊಂಡು ಎಲ್ಲೆಲ್ಲಿಯೂ, ಎಲ್ಲರಲ್ಲಿಯೂ ಹರಡುವಂತಾಯಿತು'' ಎಂದಿದ್ದಾರೆ.

ಯುವಕರನ್ನು ಹುರಿದುಂಬಿಸುವ ಸಲುವಾಗಿ ರಾಷ್ಟ್ರಗೀತೆ, ಕಂಠಪಾಟ, ಆಟಗಳ ಸ್ಪರ್ಧೆಯನ್ನು ಏರ್ಪಡಿಸುತ್ತಾ, ಜಯಶಾಲಿಗಳಿಗೆ ಬಹುಮಾನಗಳನ್ನು ಕೊಡುತ್ತಿದ್ದಳು. ವಿವೇಕಾನಂದರ ಪದಕವನ್ನು ಹಂಚುತ್ತಿದ್ದಳು. ಯುವಕರು ಸದಾ ಅವಳ ಸುತ್ತ ಗುಂಪುಗೂಡುತ್ತಿದ್ದರು. ಅವಳ ಮಾರ್ಗದರ್ಶನಕ್ಕಾಗಿ ನಿರೀಕ್ಷಿಸುತ್ತಿದ್ದರು. ಅವರಿಗೆಲ್ಲಾ 'ಗುರು'ವಾಗಿದ್ದಳು. ಸಾಮಾಜಿಕವಾಗಿ ರಾಷ್ಟ್ರಪ್ರಜ್ಞೆಯನ್ನು ಬೆಳೆಸುವುದರಲ್ಲಿ ನಿವೇದಿತಾಳ ವ್ಯಕ್ತಿತ್ವ, ಲೇಖನ, ಭಾಷಣಗಳು ಹೆಚ್ಚು ಪರಿಣಾಮಕಾರಿಯಾಗಿದ್ದವು. 'ಡಾನ್ ಸೊಸೈಟಿ'ಯಲ್ಲಿ ನಿವೇದಿತಾಳ ಕಾರ್ಯ ಚಟುವಟಿಕೆಯ ಬಗ್ಗೆ ಅನೇಕರು ಮೆಚ್ಚಿ ಬರೆದಿದ್ದಾರೆ.

ಶ್ರೀ ಗಿರಿಜಾಶಂಕರ್ ರಾಯ್ ಚೌಧರಿಯವರು, ಬಂಗಾಳಿ ಭಾಷೆಯ 'ಉದ್ಬೋಧನ' ದಲ್ಲಿ ''ಭಾರತಕ್ಕೆ ಪ್ರಾಚೀನ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ ಪ್ರೇರಣೆ ನಿವೇದಿತಾಳದ್ದು. ತನ್ನದೇ ಆದ ವಿಶಿಷ್ಟ ರೀತಿಯಲ್ಲಿ, ಯುವಕರಲ್ಲಿ ರಾಷ್ಟ್ರೀಯತೆಯ ಜೊತೆಗೆ ವಿದ್ಯುತ್ ಪ್ರವಾಹದಂತೆ ಕ್ರಾಂತಿಕಾರಿ ರಾಜನೀತಿಯ ಪ್ರಚಾರ ಮಾಡಿದ್ದಳು'' ಎಂದು ಬರೆದಿದ್ದಾರೆ.

'ಅನುಶೀಲನ ಸಮಿತಿ' ಯಲ್ಲಿಯೂ ಸಿ.ಆರ್. ದಾಸ್, ರಾಸ್ ಬಿಹಾರಿ ಘೋಷ್ ಅವರ ಜೊತೆ ಸೋದರಿ ನಿವೇದಿತಾಳ ಪಾತ್ರವಿತ್ತು. ಈ ಸಂಘಗಳ ಮೂಲಕ ಯುವಕರ ದೈಹಿಕ ಬೆಳವಣಿಗೆಗೆ ವ್ಯಾಯಾಮ ಶಾಲೆಗಳನ್ನು ನಡೆಸುತಿದ್ದರು. ಈ ಸಂದರ್ಭದಲ್ಲಿ ಮಹಾಪುರುಷರ ಜೀವನ, ಇತರ ದೇಶಗಳ ಸ್ವಾತಂತ್ರ್ಯ ಚಳುವಳಿಗಳಿಗೆ ಸಂಬಂಧಪಟ್ಟ ವಿಚಾರಗಳು, ರಾಜನೀತಿ, ಅರ್ಥಶಾಸ್ತ್ರ, ಮಹಾಕಾವ್ಯಗಳು, ಭಗವದ್ಗೀತೆ ಇತ್ಯಾದಿಗಳ ಕುರಿತು ಗಣ್ಯವ್ಯಕ್ತಿಗಳಿಂದ ತರಗತಿಗಳು ನಡೆಯುತ್ತಿದ್ದವು. ಇವೆಲ್ಲವುಗಳ ಹಿಂದೆ ನಿವೇದಿತಾಳ ಪರಿಶ್ರಮ ವಿಶೇಷವಾಗಿರುತ್ತಿತ್ತು.

ರ್‍ಯಾಟ್‌ಕ್ಲಿಫ್ ಅವರ ಹೇಳಿಕೆ ಇಂತಿದೆ: ''ಭಾರತೀಯ ಯುವಕರಲ್ಲಿ ಹೊಸ ಜೀವನ ದೃಷ್ಟಿಯನ್ನು, ಶಿಕ್ಷಣವನ್ನೂ ನೀಡಲು ಎಷ್ಟೋ ಜನರು ಪ್ರಯತ್ನಿಸುತ್ತಿದ್ದರು. ಆದರೆ ಬಂಗಾಳಿ ಯುವಕರಲ್ಲಿ ಒಂದು ಶಕ್ತಿಯುತ ಸೂಕ್ಷ್ಮ ಸಾಮಾಜಿಕ ಪ್ರಜ್ಞೆ ಮತ್ತು ರಾಜಕೀಯ ಪ್ರಜ್ಞೆ ಬೆಳೆಯುವಲ್ಲಿ ನಿವೇದಿತಾಳ ವ್ಯಕ್ತಿತ್ವ ಮತ್ತು ಅವಳ ಪ್ರಖರ ಲೇಖನಿಯ ಪ್ರಭಾವ ಅತ್ಯಂತ ಪರಿಣಾಮಕಾರಿಯಾದದ್ದು ಎಂಬುದರಲ್ಲಿ ಅವಳನ್ನರಿತ ಯಾರಿಗೂ ಸಂದೇಹವುಂಟಾಗದು.'' ಪ್ರಖ್ಯಾತ ಅರ್ಥಶಾಸ್ತ್ರಜ್ಞರೂ, ರಚನಾತ್ಮಕ ಚಿಂತಕರೂ ಆಗಿದ್ದ ವಿನಯ್ ಸರ್ಕಾರ್ ಅವರು ಡಾನ್ ಸೊಸೈಟಿಯಲ್ಲಿ ನಿವೇದಿತಾಳ ಕಾರ್ಯ ಚಟುವಟಿಕೆಯನ್ನು ಗಮನಿಸಿ, ''ವಿದೇಶಿಯೊಬ್ಬಳ ಮನಸ್ಸಿನಲ್ಲಿ ಭಾರತದ ಹಿತಚಿಂತನೆಯೊಂದನ್ನು ಬಿಟ್ಟು ಮತ್ತೇನೂ ಇಲ್ಲದಿರುವುದು ಹೇಗೆ ಸಾಧ್ಯ?'' ಎಂದು ಆಶ್ಚರ್ಯದಿಂದ ಹೇಳುತ್ತಾರೆ. ಈ

ಮಾತುಗಳ ಆಧಾರದಲ್ಲಿ ನಿವೇದಿತಾ ಭಾರತೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ನೀಡಿದ ಕೊಡುಗೆ ಅತ್ಯಮೂಲ್ಯವೆನ್ನಬಹುದು.

ಕ್ರಾಂತಿಕಾರಿ ಹೋರಾಟವನ್ನು ಬೆಂಬಲಿಸುವವರಲ್ಲಿ ಒಬ್ಬರಾದ ಅರವಿಂದ ಘೋಷರು, ಆಗ ಬರೋಡದಲ್ಲಿ ವಿಶ್ವವಿದ್ಯಾಲಯ ಒಂದರಲ್ಲಿ ಉಪನ್ಯಾಸಕರಾಗಿದ್ದರು. ತಮ್ಮ ಕಡೆಯಿಂದ ಗುಪ್ತವಾಗಿ ಒಬ್ಬರನ್ನು ಕೊಲ್ಕತ್ತಾಗೆ ಕಳುಹಿಸಿದರು. ಇಲ್ಲಿನ ವಿದ್ಯಮಾನವನ್ನೆಲ್ಲಾ ತಿಳಿದು ಕ್ರಾಂತಿಕಾರಿ ಚಳುವಳಿಗೆ ಬೆಂಬಲಿಸಿದರು. ಐದು ಜನರ (ಅನುಶೀಲನ ಸಮಿತಿ) ಒಂದು ಸಮಿತಿಯನ್ನು ಮಾಡಿ, ಅದರಲ್ಲಿ ನಿವೇದಿತಾ ಸಹ ಒಬ್ಬ ಸದಸ್ಯಳಾಗಿರುವಂತೆ ನೇಮಿಸಿದರು. ಈ ಸಮಿತಿಯ ಅಭಿಪ್ರಾಯದಂತೆ ಕೇವಲ ಅಸಹಕಾರ ಮತ್ತು ಮಂದ ಪ್ರತಿಭಟನೆಯಿಂದ ಭಾರತ ಸ್ವಾತಂತ್ರ್ಯ ಪಡೆಯುವುದು ಅಸಾಧ್ಯ. ಸಮಯ ಬಿದ್ದರೆ ಸಶಸ್ತ್ರ ಹೋರಾಟಕ್ಕೂ ಸಿದ್ಧವಾಗಬೇಕೆನ್ನುವುದನ್ನು ನಿವೇದಿತಾ ಒಪ್ಪಿದಳು. ಇದು ಅವಳ ಕ್ಷಾತ್ರತೇಜಸ್ಸಿಗೆ ತಕ್ಕ ಮಾತು!

ಒಂದು ದಿನ ಕೊಲ್ಕತ್ತಾದ ಟೌನ್ ಹಾಲಿನಲ್ಲಿ 'ಡೈನಾಮಿಕ್ ರಿಲಿಜಿಯನ್' ಎಂಬ ವಿಷಯವಾಗಿ ನಿವೇದಿತಾ ಮಾತನಾಡಿದಳು. ಎ.ಜೆ. ಎಫ್. ಬ್ಲೈರ್, ''ವೇದಿಕೆ ಐರೋಪ್ಯರಿಂದ ತುಂಬಿತ್ತು. ಸಭಾಭವನ ಯುವಕರಿಂದ ಕಿಕ್ಕಿರಿದಿತ್ತು. ಭಾಷಣದಲ್ಲಿ ದೇಶ ಭಕ್ತಿಯೇ ಪ್ರಧಾನ ವಿಷಯವಾಗಿತ್ತು. ಒಂದೂವರೆ ಘಂಟೆಗಳ ಕಾಲ ನಿರರ್ಗಳವಾಗಿ ಮಾತನಾಡಿದಳು. ಯಾವ ಟಿಪ್ಪಣಿಯ ಸಹಾಯವೂ ಇರಲಿಲ್ಲ. ಆ ಭಾಷಣದ ಸಾರಾಂಶ.. 'ಇನ್ನು ಮಾತು ಸಾಕು, ಇನ್ನು ಮುಂದೆ ಕೆಲಸ - ಬರೀ ಕೆಲಸ.' ಅವಳು ಅಂದು ಬಿತ್ತಿದ ಬೀಜ ಬಹಳ ಬೇಗ ಫಲ ಕೊಟ್ಟಿತು'' ಎಂದು ಬರೆಯುತ್ತಾರೆ. ಈ ಭಾಷಣವನ್ನಾಲಿಸಿದ ಬಿಪಿನ್‌ಚಂದ್ರ ಪಾಲರು, ''ಅದು 'ಡೈನಾಮಿಕ್ ರಿಲಿಜಿಯನ್' ಅಲ್ಲ ಅದು 'ಡೈನಾಮೈಟ್' (ಸಿಡಿಮದ್ದು)'' ಎಂದರು.

೧೯೦೪ರ ಜೂನ್ ತಿಂಗಳಿನಲ್ಲಿ ನಿವೇದಿತಾಳ ಪ್ರಸಿದ್ಧ 'ದ ವೆಬ್ ಆಫ್ ಇಂಡಿಯನ್ ಲೈಫ್' ಪ್ರಕಟವಾಯಿತು. ಇದು ಬಹಳಷ್ಟು ಟೀಕೆಗೂ ಒಳಗಾಯಿತು. ಪ್ರಶಂಸೆಯನ್ನೂ ಪಡೆಯಿತು. ಅದರಲ್ಲಿ ಭಾರತೀಯ ಜೀವನದ ಆಚಾರ, ವಿಚಾರ, ಸಂಪ್ರದಾಯಗಳ ಬಗ್ಗೆ ಮನಮುಟ್ಟುವ ಚಿತ್ರವನ್ನು ರಚಿಸಿದ್ದಳು.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಂದಗಾಮಿಗಳಲ್ಲೊಬ್ಬರಾದ ಗೋಪಾಲಕೃಷ್ಣ ಗೋಖಲೆಯವರೊಂದಿಗೆ ನಿವೇದಿತಾಳಿಗೆ ಆಪ್ತ ಸ್ನೇಹವಿತ್ತು. ಇವಳು ಪಕ್ಷಾತೀತೆ! ಗೋಖಲೆಯವರು ಕೊಲ್ಕತ್ತಾದಲ್ಲಿ ಇದ್ದಾಗ ಸಲಹೆ, ಸೂಚನೆಗಳನ್ನು ಪಡೆಯುವ ಸಲುವಾಗಿ ಅವಳ ಮನೆಗೆ ಬರುವುದು ಸರ್ವೇಸಾಮಾನ್ಯವಾಗಿತ್ತು. ನಿವೇದಿತಾಳ ಬಗ್ಗೆ ಅವರಿಗಿದ್ದ ಭಕ್ತಿ-ಗೌರವದ ಪರಿಚಯ ಈ ಕೆಳಗಿನ ಪತ್ರದಿಂದ ತಿಳಿಯಬಹುದಾಗಿದೆ: ''ನಿವೇದಿತಾಳ ವ್ಯಕ್ತಿತ್ವ ಅದ್ಭುತ, ಪರಿಣಾಮಕಾರಿಯಾದದ್ದು. ಅವಳೊಡನೆ ಭೇಟಿಯಾಗುವುದೆಂದರೆ ವಿಶೇಷ ಶಕ್ತಿಯನ್ನು ಸಂಪರ್ಕಿಸಿದಂತೆ. ಅವಳ ಕಾರ್ಯದಕ್ಷತೆ, ದೃಢನಂಬಿಕೆ, ಸಾಮರ್ಥ್ಯ, ಅಪೂರ್ವ ಪ್ರತಿಭೆ ಇತ್ಯಾದಿ ಗುಣಗಳು ಅವಳನ್ನು ಸರ್ವಕಾಲಕ್ಕೂ ಒಬ್ಬ ಪರಮ ಶ್ರೇಷ್ಠ ಮಹಿಳೆಯನ್ನಾಗಿ ಮಾಡಬಲ್ಲವು. ಅವಳು ತನ್ನ ಆದರ್ಶದ ಗುರಿಯನ್ನು ತಲುಪುವುದರಲ್ಲಿ ಸಂಶಯವೇ ಇಲ್ಲ. ಭಾರತ ಪ್ರೇಮ ಅವಳನ್ನು ಭಾರತಕ್ಕೆ ಕರೆತಂದಿತು. ಭಾರತದ ಆಕರ್ಷಣೆಗೆ ಒಳಗಾಗಿ, ತನ್ನನ್ನೇ ನಿವೇದಿಸಿಕೊಂಡಳು. ನಿವೇದಿತಾ ಕೇವಲ ಭಾರತದ ಹಿರಿಮೆ-ಗರಿಮೆಗಳಿಗೆ ಮಾರುಹೋದವಳಲ್ಲ. ಇಲ್ಲಿನ ಕೆಲವು ದೋಷಗಳನ್ನು ಸ್ವೀಕರಿಸಿ ಅದನ್ನು ಸರಿಪಡಿಸುವ ಸಲುವಾಗಿಯೂ ಹೋರಾಡಿದಳು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಎಲ್ಲಾ ಹೋರಾಟಗಾರರೊಡನೆಯೂ ಸಂಪರ್ಕವನ್ನು ಇಟ್ಟುಕೊಂಡಿದ್ದಳು. ಪರರಾಷ್ಟ್ರಗಳ ಅನುಕರಣೆಯನ್ನು ಖಂಡಿಸಿದಳು. ಭಾರತೀಯತೆಯತ್ತ ಸೆಳೆದಳು. ರಾಷ್ಟ್ರಪ್ರಜ್ಞೆಯನ್ನು ಕೆರಳಿಸಿದಳು'' ಎಂದು ಮುಕ್ತ ಮನಸ್ಸಿನಿಂದ ಹೇಳಿದ್ದಾರೆ.

ಭಾರತವನ್ನು, ಭಾರತವಾಗಿಯೇ ಉಳಿಸುವುದಕ್ಕೆ ಅವಳ ಜೀವನ ಮುಡಿಪಾಗಿತ್ತು. ಅವಳ ಈ ರಾಷ್ಟ್ರಪ್ರೇಮ, ಭಕ್ತಿಯಿಂದಾಗಿ ಭಾರತಕ್ಕೆ ಆಗುವ ಯಾವ ಅನ್ಯಾಯವಾಗಲಿ, ಅಪಮಾನವಾಗಲಿ ಅವಳಿಂದ ಸಹಿಸಲಾಗುತ್ತಿರಲಿಲ್ಲ. ಒಂದು ಘಟನೆಯಿಂದ ಅವಳ ರಾಷ್ಟ್ರಪೇಮದ ಆಳವನ್ನು ಅರಿಯಬಹುದು. ೧೯೦೫ ಫೆಬ್ರುವರಿ ೧೧ನೇ ದಿನಾಂಕ ಕೊಲ್ಕತ್ತಾ ವಿಶ್ವವಿದ್ಯಾಲಯದ ಘಟಿಕೋತ್ಸವದ ಭಾಷಣದಲ್ಲಿ ಲಾರ್ಡ ಕರ್ಜನ್ ರವರು ''ಸತ್ಯದ ಅತ್ಯುಚ್ಚ ಕಲ್ಪನೆ ಬಹುಮಟ್ಟಿಗೆ ಪಶ್ಚಿಮದ್ದು. ಪೂರ್ವದೇಶದಲ್ಲಿ ಗೌರವ ಪಡೆಯುವುದಕ್ಕೆ ಮುಂಚೆಯೇ ಪಶ್ಚಿಮ ದೇಶದ ನೀತಿ-ನಿಯಮಗಳಲ್ಲಿ, ಸತ್ಯಕ್ಕೆ ಉನ್ನತ ಸ್ಥಾನವಿತ್ತು'' ಎಂದು ಹೇಳಿದಾಗ, ಸಭೆಯಲ್ಲಿ ಇದ್ದ ಅನೇಕರಿಗೆ ಬಹಳ ನೋವಾಯಿತು. ಆದರೆ ಯಾರೂ ಪ್ರತಿಭಟಿಸಲಿಲ್ಲ, ಯಾರಿಗೂ ಧೈರ್ಯವಿರಲಿಲ್ಲ. ನಂತರ ಸರ್ ಗುರುದಾಸ್ ಬ್ಯಾನರ್ಜಿ ಮುಂತಾದವರು ಚರ್ಚಿಸುತ್ತಿದ್ದಾಗ ನಿವೇದಿತಾ ಅಲ್ಲಿಗೆ ಬಂದಳು. ಅವಳು ಕ್ರೋಧದಿಂದ ಕುದಿಯುತ್ತಿದ್ದಳು. ಲಾರ್ಡ ಕರ್ಜನ್ ಬರೆದ ''ದೂರ ಪ್ರಾಚ್ಯದ ಸಮಸ್ಯೆಗಳು'' ಎಂಬ ಪುಸ್ತಕವನ್ನು ಬ್ಯಾನರ್ಜಿಯವರಿಂದ ಪಡೆದು, ಮಾರನೆಯ ದಿನ 'ಅಮೃತ ಬಜ್ಹಾರ್' ಪತ್ರಿಕೆಯಲ್ಲಿ ಒಂದು ವರದಿಯನ್ನು ಪ್ರಕಟಿಸಿದಳು. ಲಾರ್ಡ್ ಕರ್ಜನ್‌ರವರ ಭಾಷಣಕ್ಕೆ ಪ್ರತಿಕ್ರಿಯಿಸುತ್ತ, '' ಆತ್ಮಸ್ತುತಿ ಪ್ರಾಮಾಣಿಕವಾಗಿರಬಹುದು ಅಥವಾ ಅಪ್ರಾಮಾಣಿಕವಾಗಿಯೂ ಇರಬಹುದು. ಅದು ಏನೇ ಆದರೂ, ಅದನ್ನು ಬಿಟ್ಟುಬಿಡಬೇಕು. ಅದು ಪ್ರಾಮಾಣಿಕವಾದರೂ ಕೂಡ ಅಸತ್ಯ, ಅಪ್ರಾಮಾಣಿಕವಾದರಂತೂ ನೀಚತನದ ಪರಮಾವಧಿ'' ಎಂದು. ಇದು ಅವಳಲ್ಲಿದ್ದ ರಾಷ್ಟ್ರೀಯತೆಯ ಪ್ರೇಮ.

ಈ ವರದಿಯನ್ನು 'ದ ಸ್ಟೇಟ್ಸ್‌ಮನ್' ಪತ್ರಿಕೆಯೂ ಪ್ರಕಟಿಸಿತು. ಇದನ್ನು ಬರೆದವರ ಹೆಸರು ಇರಲಿಲ್ಲ. ನಿವೇದಿತಾಳ ನಿಕಟ ಪರಿಚಯವಿದ್ದವರಿಗೆಲ್ಲಾ ಇದು ನಿವೇದಿತಾಳ ವರದಿ ಎನ್ನುವುದರಲ್ಲಿ ಸಂಶಯ ಉಳಿಯಲಿಲ್ಲ. ಪ್ರಬಂಧದ ಪ್ರಾರಂಭದಲ್ಲಿಯೇ ''ಸತ್ಯಸಂಧತೆಯ ಬಗೆಗಿನ ಅವಹೇಳನವನ್ನು ಯಾವ ವಿದ್ಯಾರ್ಥಿಯೂ ಪ್ರತಿಭಟಿಸದೆ ಇದ್ದದ್ದು ಅವಮಾನಕರ'' ಎಂದು ಯುವಕರ ರಾಷ್ಟ್ರಪ್ರಜ್ಞೆಯನ್ನು ಕೆರಳಿಸಿದಳು. ಇದರಿಂದ ರಾಜಕೀಯ ಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆಯಾಯಿತೆಂದು ಖಚಿತವಾಗಿ ತಿಳಿದು ಬಂದಿದೆ. ಅವಿರತವಾದ ಕಾರ್ಯಚಟುವಟಿಕೆಗಳಿಂದ ನಿವೇದಿತಾಳ

ದೇಹ ಬಳಲಿತು. ವಿಶ್ರಾಂತಿಗಾಗಿ ಅವಳು ಡಾರ್ಜಿಲಿಂಗ್‌ಗೆ ಹೋದಳು.

ಆರೋಗ್ಯ ಸುಧಾರಿಸಿದ ನಂತರ ಕೊಲ್ಕತ್ತಾಕ್ಕೆ ಹಿಂದಿರುಗಿದಾಗ ಜನರು ಅತ್ಯಂತ ಆದರದಿಂದಲೂ ಪ್ರೀತಿಯಿಂದಲೂ ಅವಳನ್ನು ಸ್ವಾಗತಿಸಿದರು. ೧೯೦೫ರ ಜುಲೈ ೨೦ರಂದು ಪೂರ್ವ ಬಂಗಾಳದ ವಿಭಜನೆಯ ನಿರ್ಧಾರದಿಂದ ಸರ್ಕಾರದ ವಿರುದ್ಧ ಜನರು ಸಿಡಿದೆದ್ದರು. ಕಾಂಗ್ರೆಸ್ ನಾಯಕರಿಗೆ ಮುಖಭಂಗವಾಯಿತು. ಈ ಸಂದರ್ಭದಲ್ಲಿ ಜನರ ಸ್ವದೇಶಾಭಿಮಾನ, ಅಸಹಕಾರದ ಕಡೆಗೆ ತಿರುಗಿತು. ಸ್ವದೇಶಿ ಚಳುವಳಿಯಲ್ಲಿ ವಿದೇಶಿ ವಸ್ತುಗಳನ್ನೆಲ್ಲಾ ಬಹಿಷ್ಕರಿಸಲಾಯಿತು. ನಿವೇದಿತಾ ಇದರ ಬೆಂಬಲಿಗಳಾದಳು. ಸ್ವತಃ ಎಲ್ಲಾ ವಸ್ತುಗಳನ್ನೂ ಸ್ವದೇಶಿಯವಾದದ್ದನ್ನೇ ಉಪಯೋಗಿಸತೊಡಗಿದಳು. ಆಹಾರ, ಉಡುಪು ಎಲ್ಲವೂ ಸ್ವದೇಶಿ! ತಾನೇ ಕೈಗಾಡಿಯಲ್ಲಿ ಸ್ವದೇಶಿ ವಸ್ತುಗಳನ್ನು ತುಂಬಿಕೊಂಡು ಗಲ್ಲಿಗಲ್ಲಿಗಳಲ್ಲಿ ಮಾರಾಟ ಮಾಡಿದಳು. ನಿವೇದಿತೆಯ ದೇಶಪ್ರೇಮದಿಂದ ಆಕರ್ಷಿತರಾಗಿ ಮಹಿಳೆಯರು ಸ್ವದೇಶೀ ವಸ್ತುಗಳನ್ನು ಸ್ವೀಕರಿಸುತ್ತಾ, ವಿದೇಶೀ ವಸ್ತುಗಳಿಗೆ ಬಹಿಷ್ಕಾರ ಹಾಕಿದರು. ನಿವೇದಿತಾಗೆ ಇದು ಬಹಳ ಸಂತೋಷವನ್ನುಂಟುಮಾಡಿತು. ಅವರಲ್ಲಿ ಜಾಗೃತವಾದ ರಾಷ್ಟ್ರ ಪ್ರೇಮವನ್ನು ಆಕೆ ಮೆಚ್ಚಿದಳು. ಕೊಲ್ಕತ್ತಾದ ಸಣ್ಣ-ಪುಟ್ಟ ವ್ಯಾಪಾರಿಗಳು ಸಹ ವಿದೇಶೀ ವಸ್ತುಗಳನ್ನು ಬಹಿಷ್ಕರಿಸಿದ್ದನ್ನು ಕಂಡು ಅತ್ಯಂತ ಸಂತೋಷಪಟ್ಟಳು. ಇಷ್ಟೆಲ್ಲಾ ವಿರೋಧದ ನಡುವೆಯೂ ಅಕ್ಟೋಬರ್ ೧೬ರಂದು ಸರ್ಕಾರ ಬಂಗಾಳ ವಿಭಜನೆಯನ್ನು ಕಾರ್ಯಗತಗೊಳಿಸಿಬಿಟ್ಟಿತು. ಆ ದಿನವೇ ಇದರ ವಿರೋಧಸೂಚಕವಾಗಿ, ಸಾಂಕೇತಿಕವಾಗಿ ಒಂದು ಫೆಡರೇಷನ್ ಹಾಲ್ ಕಟ್ಟಿಸುವುದಕ್ಕೆ ಶಂಕು ಸ್ಥಾಪನೆ ಮಾಡಲಾಯಿತು. ನಿವೇದಿತಾ ತನ್ನ ದಿನಚರಿಯಲ್ಲಿ ಈ ದಿನವನ್ನು 'ರಾಷ್ಟ್ರೀಯ ದಿನ' ವೆಂದು ಗುರುತಿಸಿಕೊಂಡಳು.

೧೯೦೫ರ ಡಿಸೆಂಬರ್‌ನಲ್ಲಿ ಕಾಶಿಯಲ್ಲಿ ನಡೆದ ಸಮ್ಮೇಳನದಲ್ಲಿ, ಕಾಂಗ್ರೆಸ್ ಇಬ್ಭಾಗವಾಗುವುದನ್ನು ಗಮನಿಸಿ, ಕಾಂಗ್ರೆಸ್‌ಗೆ ಮನವಿಯೊಂದನ್ನು ಸಲ್ಲಿಸಿದಳು. ''ಭಾರತದ ಮುಕ್ತಿಗೆ ಮುಖ್ಯವಾಗಿ ಮಾಡಬೇಕಾದ ಕಾರ್ಯದ ಕಡೆ ಗಮನಹರಿಸುವಂತೆ ಜನರನ್ನು ಆಕರ್ಷಿಸಬೇಕಾದ್ದು ಕಾಂಗ್ರೆಸ್‌ನ ಕರ್ತವ್ಯವಾಗಿದೆ. ಇಡೀ ರಾಷ್ಟ್ರದಲ್ಲಿ ರಾಷ್ಟ್ರಪ್ರಜ್ಞೆಯನ್ನು ಬೆಳೆಸುವುದರ ಕಡೆಗೆ ಗಮನ ಹರಿಸಬೇಕಾಗಿದೆ'ಎಂದು ಸಮ್ಮೇಳನದಲ್ಲಿ ಭಾಗವಹಿಸಿ ಹೇಳಿದಳು. ತೀವ್ರಗಾಮಿಗಳ ಕೈ ಮೇಲಾಗಿದ್ದುದಕ್ಕೆ ಅವಳು ಸಂತೋಷಪಟ್ಟಳು. ಬಾಲ್ಯದಿಂದಲೂ ಅವಳಲ್ಲಿದ್ದ ಸ್ವಾತಂತ್ರ್ಯಪ್ರಿಯತೆಗೆ ಅನುಗುಣವಾಗಿ ಹೋರಾಟ ನಡೆಸುವುದು ಅವಳಿಗೆ ಸಹಜವಾಗಿತ್ತು.

ನಿವೇದಿತಾಳ ಬಹಳ ದಿನಗಳ ಬಯಕೆಯಂತೆ ಆಕೆ ರಜಪುತಾನ ಪ್ರವಾಸ ಕೈಗೊಂಡಳು. ಅಲ್ಲಿನ ವೀರರಮಣಿಯರ ಚರಿತ್ರೆ ಇವಳ ರಾಷ್ಟಪ್ರೇಮಕ್ಕೆ ಮತ್ತಷ್ಟು ಪುಷ್ಟಿಯನ್ನು ಕೊಟ್ಟಿತು. ಸರಯೂಬಾಲ ಸರ್ಕಾರ್ ಎನ್ನುವವರು ಬರೆಯುತ್ತಾರೆ: ''ನಿವೇದಿತಾ ಶಾಲೆಯ ವಿದ್ಯಾರ್ಥಿನಿಯರಿಗೆ ರಜಪುತಾನದ ಬಗ್ಗೆ ವಿವರಿಸುತ್ತಾ, 'ನಾನು ಬೆಟ್ಟವನ್ನು ಹತ್ತಿ ಬಂದು ಬಂಡೆಯ ಮೇಲೆ ಕಣ್ಣು ಮುಚ್ಚಿ ಕುಳಿತುಕೊಂಡೆ. ವೀರ ಪದ್ಮಿನಿಯ ಚಿತ್ರ ಕಣ್ಣಮುಂದೆ ಕಾಣಿಸಿತು. ಅಗ್ನಿಕುಂಡದ ಮುಂದೆ ಕೈ ಜೋಡಿಸಿ ನಿಂತಿದ್ದ ಅವಳ ರೂಪ, ಸೌಂದರ್ಯ ಬೆರಗುಗೊಳಿಸಿತು' ಎಂದು ಅಭಿನಯಪೂರ್ವಕವಾಗಿ ಹೇಳುತ್ತಿದ್ದಾಗ ನಿವೇದಿತಾಳಲ್ಲಿ ಉಂಟಾಗಿದ್ದ ಪರಿವರ್ತನೆ ನಮ್ಮನ್ನು ಆಶ್ಚರ್ಯ ಚಕಿತರನ್ನಾಗಿ ಮಾಡಿತು'' ಎಂದು. ರಾಷ್ಟ್ರಪ್ರೇಮಿಗಳ ಬಗ್ಗೆ ನಿವೇದಿತಾಳಿಗೆ ಇದ್ದ ಗೌರವ ಭಕ್ತಿ ಅಪಾರ.

ಅಲ್ಲಿಂದ ಹಿಂದಿರುಗಿದ ನಂತರ ನಿವೇದಿತಾ ಕಾಶಿಯಲ್ಲಿ ಆ್ಯನ್ನಿ ಬೆಸಂಟ್‌ರನ್ನು ಬೇಟಿಯಾದಳು. ೧೯೦೬ರ ಜನವರಿ ೨೦ರಂದು ಸ್ವಾಮಿ ವಿವೇಕಾನಂದರ ಜನ್ಮೋತ್ಸವದ ಸಂದರ್ಭದಲ್ಲಿ, ''ಹಿಂದೂ ಧರ್ಮ ಮತ್ತು ಸ್ವಾಮಿ ವಿವೇಕಾನಂದ'' ಎನ್ನುವ ವಿಷಯವಾಗಿ ಅಮೋಘವಾದ ಉಪನ್ಯಾಸವನ್ನಿತ್ತಳು. ೧೯೦೬ರ ಕೊಲ್ಕತ್ತಾದ ಕಾಂಗ್ರೆಸ್ ಸಮ್ಮೇಳನದಲ್ಲಿ ಭಾಗವಹಿಸಿದಳು. ಮಂದಗಾಮಿ ಹಾಗೂ ತೀವ್ರಗಾಮಿಗಳ ನಡುವಿನ ಬಿರುಕು ಹೆಚ್ಚಾದುದನ್ನು ಕಂಡು ಅವಳು ನೊಂದು ಬರೆದಳು: ''ಒಂದೇ ಯುದ್ಧಭೂಮಿಯಲ್ಲಿ ನಿಂತು, ಶತ್ರುವನ್ನು ಬಿಟ್ಟು ತಮ್ಮತಮ್ಮಲ್ಲಿಯೇ ಹೋರಾಡುತ್ತಾ ಸಮಯವನ್ನು ಹಾಳು ಮಾಡುತ್ತಿದ್ದಾರೆ. ಈ ವಿಷಯ ಭಾರತಕ್ಕೆ ತಿಳಿಯಬೇಕು. ರಾಜಕೀಯ ಗೊಂದಲಕ್ಕೆ ಈಡಾಗದೆ, ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಹೊರಾಡುವುದಕ್ಕೆ ಸಿದ್ಧವಾಗಬೇಕು ಎಂದರಿಯಬೇಕು.''

ಈ ಸಂದರ್ಭದಲ್ಲಿಯೇ ಒಂದು ರಾಷ್ಟ್ರಧ್ವಜದ ಆವಶ್ಯಕತೆಯನ್ನರಿತು, ಅದನ್ನು ರೂಪಿಸುವ ಚಿಂತನೆ ಮಾಡಿದಳು. ಚಿಹ್ನೆ 'ವಜ್ರ' ವಾಗಿರಬೇಕೆಂದು ಅವಳ ಅಭಿಪ್ರಾಯ. ಭಾರತೀಯ ಸಂಪ್ರದಾಯದ ಪ್ರಕಾರ ವಜ್ರವು ಗೌರವ, ಪವಿತ್ರತೆ, ಜ್ಞಾನ, ಶಕ್ತಿ ಮತ್ತು ದಿವ್ಯತೆಗಳಿಗೆ ಸಂಕೇತವಾಗಿದೆ. ರಾಕ್ಷಸ ಸಂಹಾರಕ್ಕಾಗಿ ದಧೀಚಿ ಮಹರ್ಷಿ ತನ್ನ ವಜ್ರಸದೃಶವಾದ ಮೂಳೆಯನ್ನು ನಿಃಸ್ವಾರ್ಥವಾಗಿ ದೇವತೆಗಳಿಗೆ ನೀಡಿದ್ದು ನಿವೇದಿತಾಳಿಗೆ ಆದರ್ಶವಾಗಿತ್ತು. ವಜ್ರದ ಸಂಕೇತವುಳ್ಳ, 'ವಂದೇ ಮಾತರಂ' ಮಂತ್ರದಿಂದೊಡಗೂಡಿದ ರಾಷ್ಟ್ರಧ್ವಜವನ್ನು ತನ್ನ ಶಾಲೆಯ ವಿದ್ಯಾರ್ಥಿನಿಯರಿಂದ ರಚಿಸಿ, ೧೯೦೬ರ ಕಾಂಗ್ರೆಸ್ ವಸ್ತುಪ್ರದರ್ಶನದಲ್ಲಿ ಇರಿಸಿದಳು. ಅನೇಕ ಪ್ರಮುಖ ವ್ಯಕ್ತಿಗಳು ಇದನ್ನು ಸ್ವೀಕರಿಸಿ ಬಳಸುತ್ತಿದ್ದರು.

ಆಗ ಪೂರ್ವ ಬಂಗಾಳದಲ್ಲಿ ಅನಾವೃಷ್ಟಿಯ ಪರಿಣಾಮವಾಗಿ ಶೋಚನೀಯ ಪರಿಸ್ಥಿತಿ ಉಂಟಾದಾಗ, ಅವರ ಸೇವೆಗೆ ಮುಂದಾದಳು. ಅತಿವೃಷ್ಟಿಯಿಂದಾದ ಹಾವಳಿಗೆ ರಾಮಕೃಷ್ಣ ಮಿಷನ್ ಜೊತೆ ಸೇರಿ ಸೇವೆ ಸಲ್ಲಿಸಿದಳು. ಇದು ರಾಷ್ಟ್ರಪ್ರೇಮ ಅವಳಿಂದ ಮಾಡಿಸಿದ ಕೆಲಸವೆನ್ನಲಡ್ಡಿಯಿಲ್ಲ. ಬರ ಪರಿಹಾರದ ಕಾರ್ಯಕ್ಕಾಗಿ ಹಣಸಂಗ್ರಹ ಮಾಡುವುದಕ್ಕಾಗಿಯೂ ಅವಳು ದುಡಿದಳು. ತೀವ್ರ ಪರಿಶ್ರಮ ದೇಹದ ಮೇಲೆ ಪರಿಣಾಮವನ್ನುಂಟುಮಾಡಿತ್ತು. ಮಲೇರಿಯಾ ಮತ್ತು ಮೆನಿಂಜೈಟಿಸ್ ಎಂಬ ಮಿದುಳು ರೋಗಕ್ಕೆ ತುತ್ತಾಗಿ, ಕೆಲವು ಕಾಲ ವಿಶ್ರಾಂತಿ ಪಡೆದು, ಪುನಃ ಕಾರ್ಯಕ್ಷೇತ್ರಕ್ಕೆ ಸಿದ್ಧಳಾಗಿ ಬಂದಳು.

ರಾಜಕೀಯ ಆಂದೋಳನ ಕ್ರಾಂತಿಕಾರಿ ರೂಪವನ್ನು ತಳೆಯಿತು. ಬಿಪಿನ್ ಚಂದ್ರಪಾಲ್ ಬಂಗಾಳದ ತೀವ್ರಗಾಮಿ ನಾಯಕರಾದರು. ಗುಪ್ತ ಸಂಸ್ಥೆಗಳನ್ನು ರಚಿಸಿಕೊಂಡು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸತೊಡಗಿದರು. ನಿವೇದಿತಾ ಕ್ರಾಂತಿಕಾರಿ ಮನೋಭಾವದವಳಾ




ನಿವೇದಿತಾ ರೂಪಿಸಿದ ರಾಷ್ಟ್ರಧ್ವಜ

ದರೂ, ಅವಳ ಮಾತೃಹೃದಯ ಹಿಂಸಾಪ್ರವೃತ್ತಿಯನ್ನು ಸಹಿಸಲಿಲ್ಲ. ಹಿಂಸಾಪ್ರವೃತ್ತಿಯ ಹಿಂದೆಯೂ ರಾಷ್ಟ್ರಭಕ್ತಿ, ಪ್ರೇಮವಿದ್ದುದರಿಂದ, ತೀವ್ರಗಾಮಿಗಳಿಗೆ ಬೆಂಬಲ ತೋರಿಸಿದಳು. ಸರ್ಕಾರದ ಕ್ರೂರನೀತಿ ಅಸಹನೀಯವಾಗಿತ್ತು. ೧೯೦೬ರ ಏಪ್ರಿಲ್ ೧೪ರಂದು ನಡದ ಬಾರಿಸಾಲ್ ಸಮ್ಮೇಳನದಲ್ಲಿ ನಡೆದ ಸರ್ಕಾರದ ಕ್ರೂರನೀತಿಯ ವಿರುದ್ಧ ಕೊಲ್ಕತ್ತಾದಲ್ಲಿ ಉದ್ವೇಗಪೂರ್ಣ ಭಾಷಣಗಳು ನಡೆದವು. ಹೀಗೆ ಸ್ವಾತಂತ್ರ್ಯ ಚಳುವಳಿಯ ಹಿಂದೆ ನಿವೇದಿತಾಳ ಪಾತ್ರ ಅತ್ಯಂತ ಹಿರಿದು. ಕತ್ತಿ, ಗುರಾಣಿಗಳ ಹಿಡಿತಕ್ಕಿಂತ ನಿವೇದಿತಾಳ ಲೇಖನಿ ಹರಿತವಾಗಿತ್ತು. ಅವಳ ಭಾಷಣ ಪ್ರಚೋದನಕಾರಿಯಾಗಿ ಭಾರತೀಯರನ್ನು 'ಸ್ವರಾಜ್ಯ'ದ ಕಡೆಗೆ ಸಳೆಯಿತು.

ನಿವೇದಿತಾಳ ಆರೋಗ್ಯದಲ್ಲಿ ಏರುಪೇರಾದ್ದರಿಂದ, ಹವಾ ಬದಲಾವಣೆಗಾಗಿ, ಹಿತೈಷಿಗಳ ಒತ್ತಡದಿಂದ ಪಶ್ಚಿಮದೇಶಕ್ಕೆ ಹೊರಟಳು. ಅಲ್ಲಿಯೂ ಸಹ ಭಾರತದ ಚಿಂತೆ. ಭಾರತದ ಚಳುವಳಿಯ ಸುದ್ದಿಗಳು ಅವಳಿಗೆ ತಲುಪುತ್ತಿದ್ದವು. ಭಾರತಕ್ಕೆ ಹಿತವನ್ನು ಬಯಸುವ ಗಣ್ಯರನ್ನು ಭೇಟಿಮಾಡುತ್ತಿದ್ದಳು. ಭಾರತದಲ್ಲಿ ತೀವ್ರಗಾಮಿಗಳ ಕಡೆಯಿಂದ ಹಿಂಸಾಚಾರ, ಕೊಲೆ, ದರೋಡೆಗಳು ನಡೆಯುತ್ತಿದ್ದವು. ಇದು ಅವಳಿಗೆ ಬಹಳ ವೇದನೆಯ ವಿಷಯವಾಗಿತ್ತು. ಈ ಹಿಂಸಾಕೃತ್ಯಗಳ ಹಿಂದೆ ನಿವೇದಿತಾಳ ಕೈವಾಡವಿದೆ ಎಂಬ ತಪ್ಪು ಅಭಿಪ್ರಾಯ ಅನೇಕರಲ್ಲಿ ಮೂಡಿತ್ತು. ಎಫ್. ಜೆ. ಅಲೆಕ್ಸಾಂಡರ್ ಅವರನ್ನು ನ್ಯೂಯಾರ್ಕ್‌ನಲ್ಲಿ ಭೇಟಿಯಾಗಿದ್ದಳು. ಅವರು ಭಾರತಾಭಿಮಾನಿ! ಬರೆಯುತ್ತಾರೆ, ''ನನ್ನ ಕೆಲವು ವರ್ಷಗಳ ಪತ್ರಿಕೋದ್ಯಮದಲ್ಲಿ ಅನೇಕ ರೀತಿಯ ವ್ಯಕ್ತಿಗಳೊಡನೆ ಭೇಟಿಯಾಗಿದ್ದೇನೆ. ಆದರೆ ಅತ್ಯಲ್ಪ ಸಮಯದಲ್ಲಿಯೇ ನಿವೇದಿತಾಳ ವ್ಯಕ್ತಿತ್ವ ನನ್ನಲ್ಲಿ ವಿಶೇಷ ಪ್ರಭಾವ ಬೀರಿದೆ. ಅವಳಲ್ಲಿರುವ ಸಂಯೋಜಿತ ಮನಸ್ಸು ಮತ್ತು ಚಂಡಮಾರುತದಂತಹ ಶಕ್ತಿಯುಳ್ಳವರನ್ನು ನಾನು ಸಂಧಿಸಿಲ್ಲ!'' ಎಂದು. ಅವಳು ಸ್ವಲ್ಪ ಚೇತರಿಸಿಕೊಂಡ ಕೂಡಲೇ ಭಾರತಕ್ಕೆ ಹಿಂದಿರುಗಲು ಸಿದ್ಧಳಾದಳು. ಸ್ವಾತಂತ್ರ್ಯ ಚಳುವಳಿ ಅವಳನ್ನು ಕರೆಯುತ್ತಿತ್ತು. ನಿವೇದಿತಾ ಭಾರತಕ್ಕೆ ಹಿಂದಿರುಗುವ ವಿಷಯವಾಗಿ ಯಾವ ಪ್ರಚಾರವೂ ಇರಲಿಲ್ಲ. ಬರುವಾಗ ತನ್ನ ಮಾಮೂಲು ಉಡುಪನ್ನು ಬಿಟ್ಟು ಅತ್ಯಾಧುನಿಕ ಐರೋಪ್ಯ ಉಡುಗೆಯನ್ನು ತೊಟ್ಟಿದ್ದಳು. ಅವಳ ವೇಷವನ್ನು ನೋಡರಿ ದೇವಮಾತಾ ಅಚ್ಚರಿಯಿಂದ ನೋಡಿದಳು. ನಿವೇದಿತಾಳ ಹಿಂದೆ ಬ್ರಿಟಿಷ್ ಸರ್ಕಾರ ಗುಪ್ತಚರರನ್ನು ನೇಮಿಸಿತ್ತು. ಈ ಉಡುಪಿನಲ್ಲಿ ಅವಳನ್ನು ಗುರುತಿಸಲಾಗಲಿಲ್ಲ. ವಿಧ್ವಂಸಕ ಕೃತ್ಯದಲ್ಲಿ ಇವಳ ಕೈವಾಡವಿರಲಿಲ್ಲ. ಭಾರತಕ್ಕೆ ಬಂದದ್ದು ಅವಳಿಗೆ ಸಂತೋಷವಾದರೂ, ಹೋರಾಟದಲ್ಲಿ ಅನೇಕ ಪ್ರಿಯ ವ್ಯಕ್ತಿಗಳನ್ನು ಕಳೆದುಕೊಂಡಿದ್ದಳು. ಬೇಲೂರು ಮಠ, ದಕ್ಷಿಣೇಶ್ವರಗಳಿಗೆ ಭೇಟಿ ಇತ್ತಳು. ಶ್ರೀಮಾತೆಯವರನ್ನು ಕಂಡು, ಮನಸ್ಸಿಗೆ ನೆಮ್ಮದಿಯನ್ನು ತಂದುಕೊಂಡಳು. ತನ್ನ ಸ್ನೇಹಿತೆ ಮ್ಯಾಕ್ಲಿಯಾಡ್ ಗೆ ಬರೆದ ಪತ್ರದಲ್ಲಿ ''ಎಲ್ಲ ಪಕ್ಷದವರೂ ಒಂದಾಗಿ ಹೇಳುತ್ತಿದ್ದಾರೆ, ಹೊಸ ಸ್ಫೂರ್ತಿ ರಾಮಕೃಷ್ಣ-ವಿವೇಕಾನಂದರಿಂದ ಬರುತ್ತಿದೆ ಎಂದು. ಇದು ನನಗೆ ಸಂತೋಷವನ್ನುಂಟುಮಾಡಿದೆ. ಸ್ವಾಮೀಜಿಯವರ ರಾಷ್ಟ್ರಪ್ರೇಮ ಎಲ್ಲರಲ್ಲೂ ಹರಡಿದೆ. ಅವರ ಪ್ರಯತ್ನ ಯಶಸ್ಸು ತಂದಿದೆ'' ಎಂದು ಬರೆದಿದ್ದಾಳೆ. ನಿವೇದಿತಾ ಭಾರತದ ಸೇವೆಗಾಗಿ ಬಂದವಳು. ಭಾರತದ ದಾಸ್ಯವನ್ನು ಬಿಡಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದಳು, ಜನಜಾಗೃತಿಯನ್ನು ಉಂಟುಮಾಡಿದಳು ಎಂದು ಬಿಚ್ಚು ಮನಸ್ಸಿನಿಂದ ಹೇಳಿದವರು ಬಹಳ ಮಂದಿ.

೧೯೧೦ ಫೆಬ್ರವರಿ ೧ ರಂದು ಸ್ವಾಮಿ ವಿವೇಕಾನಂದರ ಜನ್ಮೋತ್ಸವ ಸಂದರ್ಭದಲ್ಲಿ 'The Master As I Saw Him' ಎಂಬ ಪುಸ್ತಕ ಉದ್ಬೋಧನದಿಂದ ಪ್ರಕಟವಾಯಿತು. ಅದರಲ್ಲಿ ಸ್ವಾಮೀಜಿ ಬಗ್ಗೆ ಬರೆಯುತ್ತಾ, ''ನನ್ನ ನೆನಪಿನ ಕೆಲವು ಸಣ್ಣಪುಟ್ಟ ವಿಷಯಗಳು ಇಲ್ಲಿ ಬರೆಯಲ್ಪಟ್ಟಿವೆ. ಪ್ರತಿಯೊಂದರಲ್ಲಿಯೂ ನಿಮ್ಮ ಶ್ರೇಷ್ಠತೆಯು ಬೆಳಗಲಿ. ಇದೇ ನನ್ನ ಪ್ರಾರ್ಥನೆ'' ಎಂದು ತನ್ನ ಅಂತರಂಗವನ್ನು ತೆರೆದಿಟ್ಟಿದ್ದಾಳೆ. ತನ್ನ ಬದುಕನ್ನು ಭಾರತಕ್ಕೆ ಮೀಸಲಾಗಿಟ್ಟು, ಭಾರತಕ್ಕೆ ನಿವೇದಿಸಿಕೊಂಡ ನಿವೇದಿತೆಯ ಜೀವನ ಧನ್ಯ!

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ, ಚಳುವಳಿಗಳಲ್ಲಿ ನಿವೇದಿತಾಳ ಪರಿಶ್ರಮ ಅತ್ಯಮೂಲ್ಯವಾದದ್ದು. ಲೇಖನದ ಪ್ರಾರಂಭದಲ್ಲಿ ಬರೆದಿರುವಂತೆ, ದೇಶಪ್ರೇಮಿಗಳ ತ್ಯಾಗ ಬಲಿದಾನಗಳಿಂದ, 'ಸ್ವರಾಜ್ಯ' ಸ್ಥಾಪನೆಗೆ ಭಾರತವು ಸಿದ್ಧವಾಗಿತ್ತು. ನಂತರ ಕಾಲಕ್ರಮೇಣ 'ಸ್ವತಂತ್ರ ಭಾರತ'ದ ನಿರ್ಮಾಣವೂ ಆಯಿತು. ಅದನ್ನು ಉಳಿಸಿಕೊಳ್ಳಬೇಕಾದ್ದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ನಿವೇದಿತಾಳ ಬಗ್ಗೆ ಬರೆಯುವುದು ಸೂರ್ಯನ ಮುಂದೆ ಸೊಡರು ಹಚ್ಚಿಟ್ಟಂತೆ. ಆದರೆ ಅವಳಿಗೆ ಸಲ್ಲಿಸುವ ಗೌರವ ಈ ನುಡಿ ಹಣತೆ. ನಿವೇದಿತೆಯ ರಾಷ್ಟ್ರಪ್ರೇಮದ ಜ್ಯೋತಿ ಎಲ್ಲರಲ್ಲೂ ಬೆಳಗಲಿ.

**ಆಧಾರ ಗ್ರಂಥಗಳು:**


1. ***The Master As I Saw Him,*** *Sister Nivedita*

2. ***Civic and National Ideals,*** *Sister Nivedita*

೩. *'**ಸೋದರಿ ನಿವೇದಿತಾ**', ಸ್ವಾಮಿ ನಿತ್ಯಸ್ಥಾನಂದ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು -೨೦*


❖